
# ಎರಡನೆಯ ಬರುವಿಕೆಯ ಅಭ್ಯಾಸ

## ಅಧ್ಯಯನ # 43



## ಸತ್ಯವೇದದಲ್ಲಿರುವ ಮಹಾ ಸತ್ಯೋಪದೇಶಗಳು

“ನಿನ್ನ ವಾಕ್ಯವೇ ಸತ್ಯವು” - ಯೋಹಾನನು 17:17

# ಸತ್ಯವೇದದಲ್ಲಿರುವ ಮಹಾ ಸತ್ಯೋಪದೇಶಗಳು

ಅಧ್ಯಯನ # 43

## ಎರಡನೆಯ ಬರುವಿಕೆಯ ಅಭ್ಯಾಸ

ದಯವಿಟ್ಟು ಗಮನಿಸಿ: ಈ ತರಗತಿಯಲ್ಲಿ ತಿಳಿಸಲಾಗಿರುವ ಎಲ್ಲಾ ವಾಕ್ಯಗಳನ್ನು ಸತ್ಯವೇದದಲ್ಲಿ ಓದುವ ಮೂಲಕ ನಿಮ್ಮ ಅಭ್ಯಾಸವನ್ನು ಮುಂದುವರಿಸಿರಿ.

ಇಲ್ಲಿ ಉಪಯೋಗಿಸಿರುವ ಅತ್ಯಧಿಕವಾದ ವಾಕ್ಯಭಾಗಗಳು(ಕೆ.ಜೆ.ವಿ) ಭಾಷಾಂತರದಿಂದ ತೆಗೆದುಕೊಳ್ಳಲಾಗಿದೆ.

ಎರಡನೆಯ ಬರುವಿಕೆಯ ಕುರಿತು ಸಾಮಾನ್ಯ ನಿರೀಕ್ಷೆಯ ವಿಷಯದಲ್ಲಿ ಇರುವ ಪ್ರಸಿದ್ಧ ಸಿದ್ಧಾಂತವನ್ನು ಅಭ್ಯಾಸ ಮಾಡಿ, ಅದು ಸತ್ಯವೇದದಲ್ಲಿ ಹಾಗೆ ಬೋಧಿಸುವುದಿಲ್ಲ ಎಂದು ಕಂಡುಹಿಡಿದು ನಮ್ಮ ಮನಸ್ಸಿನಲ್ಲಿ ಕರ್ತನ ಎರಡನೆಯ ಬರುವಿಕೆಯ

ಉದ್ದೇಶ ಮತ್ತು ಬರುವ ವಿಧಾನವನ್ನು ಕುರಿತು ಸ್ಪಷ್ಟವಾದ ಮೇಲೆ ಸತ್ಯವೇದದಲ್ಲಿ ಕಂಡುಬರುವ ನಮ್ಮ ಕರ್ತನ ಎರಡನೆಯ ಬರುವಿಕೆಯನ್ನು ಕುರಿತು ಅಭ್ಯಾಸವನ್ನು ಆರಂಭಿಸೋಣ.

ಈ ಎರಡನೆಯ ಬರುವಿಕೆಯ ವಿಷಯವು "**ರಹಸ್ಯ**"ವಾಗಿದೆ ಮತ್ತು ಕ್ರೈಸ್ತರ ಮಧ್ಯದಲ್ಲಿ ಬಹು ತಪ್ಪುತಿಳುವಳಿಕೆಯುಂಟಾಗಿದೆ. ಇದಕ್ಕೆ ಕಾರಣ ಕೆಲವು ಸತ್ಯವೇದದ ವಾಕ್ಯಗಳಾಗಿವೆ.

ಇದು ಏಕೆಂದು ಕೆಳಗಿನ ವಾಕ್ಯವನ್ನು ಓದಿ ನೋಡೋಣ –

**ಮತ್ತಾಯ 24 : 36**

"ಇದಲ್ಲದೆ ಆ ದಿನದ ವಿಷಯವೂ ಆ ಗಳಿಗೆಯ ವಿಷಯವೂ ನನ್ನ

ತಂದೆಯೊಬ್ಬನಿಗೆ ತಿಳಿಯುವದೇ ಹೊರತು ಮತ್ತಾರಿಗೂ ತಿಳಿಯದು;
ಪರಲೋಕದಲ್ಲಿರುವ ದೂತರಿಗೂ ತಿಳಿಯದು..."

ಹೌದು ! ಈ ವಾಕ್ಯವು ನಮಗೆ ಉಂಟುಮಾಡುವ ಆಲೋಚನೆ ಮತ್ತು ಕಲ್ಪನೆ ಏನೆಂದರೆ ಕರ್ತನ ಎರಡನೆಯ ಬರುವಿಕೆಯು

ಯಾರಿಗೂ ಯಾವ ಸಮಯದಲ್ಲಿಯೂ ಗೊತ್ತಾಗುವದಿಲ್ಲ !

ಆದ್ದರಿಂದ ಈ ದಿನಗಳಲ್ಲಿ ಯಾರೂ ಸಹ ಈ ವಿಷಯದ ವಿವರಣೆಯನ್ನು ಕುರಿತು ಅಭ್ಯಾಸ ಮಾಡಲು ಪ್ರಯಾಸ ಪಡುವುದಿಲ್ಲ.



ಆದರೆ ವಾಕ್ಯ – 42 ರಲ್ಲಿ ಈ ವಿಷಯವನ್ನು ಸ್ಪಷ್ಟವಾಗಿ ಕರ್ತನ ಮಾತುಗಳಲ್ಲಿ ಓದುತ್ತೇವೆ – ಅದೇನೆಂದರೆ –

**"ಎಚ್ಚರವಾಗಿರಿ"**

**ಒಬ್ಬ ವ್ಯಕ್ತಿಗೆ ಎಂದಿಗೂ ತಿಳಿಯದೆ ಇದ್ದ ಮೇಲೆ ಏಕೆ ಆ ವ್ಯಕ್ತಿ "ಎಚ್ಚರವಾಗಿರ" ಬೇಕು ?**



**ಹೀಗೆ "ಎಚ್ಚರ"ವಾಗಿರಬೇಕು ಎಂದು ಸೂಚನೆ ನೀಡಿರಲು ಏನೋ ಕಾರಣವಿರಬೇಕು!**

**ಕರ್ತನು ಹೀಗೆ ಏಕೆ ಹೇಳಬೇಕು?** ಇದು ಏಕೆಂದು ನಾವು ಕೆಳಗಿನ ವಾಕ್ಯದಲ್ಲಿ ಓದುತ್ತೇವೆ –

1 ಥೆಸಲೋನಿಕದವರಿಗೆ 5 : 2

"ರಾತ್ರಿಕಾಲದಲ್ಲಿ ಕಳ್ಳನು ಹೇಗೆ ಬರುತ್ತಾನೋ ಹಾಗೆಯೇ ಕರ್ತನ ದಿನವು ಬರುವದೆಂದು...."

ಆಹ್ ! "ಕಳ್ಳನು" ಎಂದು ಕರ್ತನು ಹೇಳಲು ಕೆಲವರು ಆಶ್ಚರ್ಯಪಡಬಹುದು? ಇದಕ್ಕೆ ಉತ್ತರ ಸ್ಪಷ್ಟವಾಗಿದೆ !

ಇದು ಕರ್ತನನ್ನು ಕುರಿತು ವೈಯಕ್ತಿಕವಾಗಿ ಹೇಳಲಿಲ್ಲ, ಆದರೆ "ಕರ್ತನ ದಿನದ" ಮತ್ತು ಆತನ ಎರಡನೆಯ ಬರುವಿಕೆಯನ್ನು ಇಲ್ಲಿ ಸೂಚಿಸಲಾಗಿದೆ –

"...ರಾತ್ರಿಕಾಲದಲ್ಲಿ ಕಳ್ಳನು ಹೇಗೆ ಬರುತ್ತಾನೋ..."

## ಇದರ ಅರ್ಥವೇನು?



ಇದು ಕರ್ತನ ಎರಡನೆಯ ಬರುವಿಕೆ ಹೇಗಿರುತ್ತದೆ ಎಂದು ಸೂಚಿಸುತ್ತದೆ –

**ತಿಳಿಯದ ಮತ್ತು ರಹಸ್ಯವಾಗಿ**

**......... ಮತ್ತು ಸ್ವಲ್ಪವೂ ಕಣ್ಣಿಗೆ ಕಾಣದೆ (ಪರೋಕ್ಷವಾಗಿ)**

ಇದು ಕಳ್ಳನು ಹೇಗೆ ಬರುತ್ತಾನೋ ಹಾಗೆಯೇ ಇರುತ್ತದೆ !!

ಆದರೆ ನಂತರ ನಾವು ಬಹು ಚಕಿತಗೊಳಿಸುವ ವಿಷಯವನ್ನು ಕೆಳಗಿನ ವಾಕ್ಯದಲ್ಲಿ ಓದುತ್ತೇವೆ –

1 ಥೆಸಲೋನಿಕದವರಿಗೆ 5 : 4

"ಆದರೆ ಸಹೋದರರೇ, ಆ ದಿನವು ಕಳ್ಳನಂತೆ ನಿಮ್ಮ ಮೇಲೆ ಬರತಕ್ಕದ್ದಲ್ಲ; ನೀವು ಕತ್ತಲೆಯಲ್ಲಿರುವವರಲ್ಲ".

**ಇದು ಏನನ್ನು ಸೂಚಿಸುತ್ತದೆ?**

ಇದರ ಸ್ಪಷ್ಟವಾದ ಅರ್ಥವೇನೆಂದರೆ ಕರ್ತನ ಎರಡನೆಯ ಬರುವಿಕೆಯು

"ಸಹೋದರ"(ರಿ) ಯರಿಗೆ ರಹಸ್ಯವಾಗಿ ಇರುವುದಿಲ್ಲ !!!

ಹೌದು ! ಈ "ಸಹೋದರ / ಸಹೋದರಿಯರು" ಯಜಮಾನನಾದ ಯೇಸುವಿನ ಹಿಂಬಾಲಕರನ್ನು ಸೂಚಿಸುತ್ತದೆ !

**ಅವರಿಗೆ ಕರ್ತನ ಎರಡನೆಯ ಬರುವಿಕೆಯ ಬಗ್ಗೆ ಗೊತ್ತಿರುತ್ತದೆ !!!**

**ಇದು ಹೇಗೆ ಎಂದು ನೀವು ಕೇಳಬಹುದು ??**

ಈ ವಿಷಯವನ್ನು ಕೆಳಗಿನ ವಾಕ್ಯವನ್ನು ಓದುವುದರ ಮೂಲಕ ಅರ್ಥಮಾಡಿಕೊಳ್ಳೋಣ –

**ಮಾರ್ಕ 13 : 35**

"ಮನೆ ಯಜಮಾನನು ಯಾವಾಗ ಬರುತ್ತಾನೋ ನಿಮಗೆ ಗೊತ್ತಿಲ್ಲದ ಕಾರಣ ಎಚ್ಚರವಾಗಿರಿ".

ಈ ವಾಕ್ಯದಲ್ಲಿ ಕರ್ತನು ...ಸ್ಪಷ್ಟವಾಗಿ ವಿರೋಧಾತ್ಮಕವಾಗಿ ಏನೋ ಹೇಳುತ್ತಿದ್ದಾನೆ!



ಏಕೆಂದರೆ ಒಂದು ಕಡೆ "ಎಚ್ಚರವಾಗಿರಿ..." ಎಂದು ಹೇಳುತ್ತಾನೆ

ಮತ್ತೊಂದು ಕಡೆ ಆತನು ಹೀಗೆ ಹೇಳುತ್ತಾನೆ –

" ಮನೆ ಯಜಮಾನನು ಯಾವಾಗ ಬರುತ್ತಾನೋ ನಿಮಗೆ ಗೊತ್ತಿಲ್ಲದ ಕಾರಣ..."

**ಒಬ್ಬ ವ್ಯಕ್ತಿಗೆ ಕರ್ತನು ಯಾವಾಗ ಬರುತ್ತಾನೆಂದು ಎಂದಿಗೂ ಗೊತ್ತಿಲ್ಲದೆ ಇರುವಾಗ ಎಚ್ಚರವಾಗಿರುವದರಿಂದ ಏನು ಪ್ರಯೋಜನ??**

ಮತ್ತೆ ಆತನು ಒತ್ತಿ ಹೇಳುವುದನ್ನು ನಾವು ವಾಕ್ಯದಲ್ಲಿ ಹೀಗೆ ಓದುತ್ತೇವೆ–

**ವಾಕ್ಯ** – 37 -"ನಾನು ನಿಮಗೆ ಹೇಳಿದ್ದನ್ನು ಎಲ್ಲರಿಗೂ ಹೇಳುತ್ತೇನೆ, ಎಚ್ಚರವಾಗಿರಿ ಅಂದನು".

ಆಹ್ ! ಕರ್ತನು "ಎಚ್ಚರವಾಗಿರಿ" ಎಂದು ಪದೇ ಪದೇ ಹೇಳುವುದಕ್ಕೆ ಮೂಲ ಕಾರಣವಿರಬೇಕು !!

ಮತ್ತು ವಾಕ್ಯ – 32 ರಲ್ಲಿ ನಾವು ಇನ್ನೂ ಹೀಗೆ ಓದುತ್ತೇವೆ –

"ಇದಲ್ಲದೆ ಆ ದಿನದ ವಿಷಯವಾಗಲಿ ಆ ಘಳಿಗೆಯ ವಿಷಯವಾಗಲಿ ನನ್ನ ತಂದೆಗೆ ತಿಳಿಯುವದೇ ಹೊರತು ಮತ್ತಾರಿಗೂ ತಿಳಿಯದು; ಪರಲೋಕದಲ್ಲಿರುವ ದೂತರಿಗೂ ತಿಳಿಯದು ; ಮಗನಿಗೂ ತಿಳಿಯದು".

**ಇಲ್ಲಿ ವಿಷಯವು ಇನ್ನೂ ಸಂಕೀರ್ಣವಾಗುತ್ತಿದೆ (complicated) !**
**ಏಕೆಂದರೆ ಸ್ವತಃ ಯೇಸುವಿಗೆ ಗೊತ್ತಿಲ್ಲವೆಂದು ನಾವು ಓದುತ್ತೇವೆ !**

ಹಾಗಾದರೆ ನಾವು ಏನನ್ನು ಅರ್ಥ ಮಾಡಿಕೊಳ್ಳಬೇಕು ???

ಹೌದು ! ಯೇಸು ಸತ್ಯವನ್ನೇ ಹೇಳುತ್ತಾನೆಂದು ನಮಗೆ ಸಂದೇಹವಿಲ್ಲದೆ ಗೊತ್ತಿದೆ !!

ಆ ಸಮಯದಲ್ಲಿ ಯೇಸು ಹೇಳುವಾಗ ಆತನಿಗೆ ನಿಜವಾಗಿಯೂ ಗೊತ್ತಿರಲಿಲ್ಲ !

**ಇದಕ್ಕೆ ಕಾರಣವೇನು?**

ಆಹ್ ! ಏಕೆಂದರೆ ಆತನು ಮರಣಪರ್ಯಂತ ತನ್ನ ನಂಬಿಗಸ್ತಿಕೆಯನ್ನು ನಿರೂಪಿಸಬೇಕಾಗಿತ್ತು –

**"ಶಿಲುಬೆಯ ಮರಣವನ್ನಾದರೂ ಹೊಂದುವಷ್ಟು..."** (ಫಿಲಿಪ್ಪಿಯವರಿಗೆ 2 : 8)

ಈ ವಿಷಯವನ್ನು ಆತನು ಶಿಲುಬೆಯಲ್ಲಿ ಮರಣ ಹೊಂದುವದಕ್ಕೆ ಮುಂಚೆ ಮಾತನಾಡುತ್ತಿದ್ದನು !



ಆದರೆ ಆತನ ಮರಣ ಮತ್ತು ಪುನರುತ್ಥಾನದ ನಂತರ ಆತನು ಹೇಳಿದ ಸ್ವಂತ ವಾಕ್ಯವನ್ನು ಕುರಿತು ಕೆಳಗಿನ ವಾಕ್ಯದಲ್ಲಿ ಹೀಗೆ ಓದುತ್ತೇವೆ –

**ಮತ್ತಾಯ 28 : 18**

**"ಪರಲೋಕದಲ್ಲಿಯೂ ಭೂಲೋಕದಲ್ಲಿಯೂ ಎಲ್ಲಾ ಅಧಿಕಾರವು ನನಗೆ ಕೊಡಲ್ಪಟ್ಟಿದೆ".**

ಹೌದು ! ಆತನು ಪರಲೋಕದಲ್ಲಿಯೂ ಭೂಲೋಕದಲ್ಲಿಯೂ ಎಲ್ಲಾ ಅಧಿಕಾರವನ್ನು ಪಡೆದುಕೊಂಡಿರುವುದಾಗಿ ಮಾತನಾಡುತ್ತಾನೆ.

**ಇದರ ನಿಜವಾದ ಅರ್ಥವೇನು?**

ನಾವು ಈ ವಿಷಯವು ಪ್ರವಾದನಾ ಚಿತ್ರಣವನ್ನು ಸೂಚಿಸುತ್ತದೆ ಎಂದು ಕೆಳಗಿನ ವಾಕ್ಯದಲ್ಲಿ ನೋಡುತ್ತೇವೆ –

**ಪ್ರಕಟನೆ 5 : 6,7**

**"ಸಿಂಹಾಸನವು, ನಾಲ್ಕು ಜೀವಿಗಳೂ ಇದ್ದ ಸ್ಥಳಕ್ಕೂ ಮತ್ತು ಹಿರಿಯರು ಇದ್ದ ಸ್ಥಳಕ್ಕೂ ಮಧ್ಯದಲ್ಲಿ ಒಂದು ಕುರಿಮರಿಯು ವಧಿಸಲ್ಪಟಂತೆ ನಿಂತಿರುವುದನ್ನು ಕಂಡೆನು. ಅದಕ್ಕೆ ಏಳು ಕೊಂಬುಗಳೂ ಏಳು ಕಣ್ಣುಗಳೂ ಇದ್ದವು. ಅವು ಏನೆಂದರೆ ಭೂಮಿಯ ಮೇಲೆಲ್ಲಾ**

**ಕಳುಹಿಸಲ್ಪಟ್ಟಿರುವ ದೇವರ ಏಳು ಆತ್ಮಗಳೇ. ಈತನು ಮುಂದೆ ಬಂದು ಸಿಂಹಾಸನದ ಮೇಲೆ ಕುಳಿತಿದ್ದಾತನ ಬಲಗೈಯೊಳಗಿಂದ ಆ ಸುರುಳಿಯನ್ನು ತೆಗೆದುಕೊಂಡನು."**

ಹೌದು ! ಇದು ಯೇಸು ಪಾಪ ಮತ್ತು ಮರಣವನ್ನು ವಶಪಡಿಸಿಕೊಂಡ ಮೇಲೆ ತಂದೆಯಾದ ದೇವರಿಂದ ಅಧಿಕಾರ ಮತ್ತು ದೇವರ ದೈವೀಕ ಯೋಜನೆಯ ತಿಳುವಳಿಕೆಯನ್ನು ಪಡೆದುಕೊಂಡು, ಅಂದಿನಿಂದ ಆತನು ಭೂಮಿಗೆ ಬರುವ ಎರಡನೆಯ ಬರುವಿಕೆಯ ವಿವರಗಳು ಮತ್ತು ವಿಷಯಗಳು ಮತ್ತು ಸಮಯವನ್ನು ತಿಳಿದುಕೊಂಡ ಸುಂದರವಾದ ಚಿತ್ರಣವಾಗಿದೆ.

ಹೌದು ! ಆತನ ಮರಣ ಮತ್ತು ಪುನರುತ್ಥಾನದ ನಂತರ ತಿಳಿದುಕೊಳ್ಳುವ ಆ ಸವಲತ್ತನ್ನು ಪಡೆದುಕೊಂಡನು !!

ಅದೇ ರೀತಿ ತಮ್ಮ ಶಿಷ್ಯರಿಗೆ ಯಜಮಾನನ ಸಲಹೆ ಏನೆಂದರೆ

**"ಎಚ್ಚರವಾಗಿರಿ"**

ಏಕೆಂದರೆ ಹೇಗೆ ಈ ವಿಷಯಗಳನ್ನು ತಿಳಿದುಕೊಳ್ಳಲು ತಕ್ಕ ಸಮಯ ಬೇಕಾಗಿತ್ತೋ–

ಹಾಗೆಯೇ ಆತನು ಶಿಷ್ಯರೂ ಸಹ ಅವರ ತಕ್ಕ ಕಾಲದಲ್ಲಿ ತಿಳಿದುಕೊಳ್ಳುವರು

**......ನೇಮಿಸಿದ ಕಾಲದಲ್ಲಿ !!**

**ಹೇಗೆ ಎಂದು ನೀವು ಕೇಳಬಹುದು ?**

**ಯಾವುದನ್ನು ಕುರಿತು ನಾವು 'ಎಚ್ಚರಿಕೆ'ಯಿಂದಿರಬೇಕು?**

**ಅದು ಆಕಾಶವೋ??**

ಅನೇಕ ಕ್ರೈಸ್ತರು ಪ್ರಕಟನೆ 1 : 7 ಮತ್ತು ಇತರ ವಾಕ್ಯಗಳನ್ನು ಕುರಿತು ಹೀಗೆಯೇ ಅಂದುಕೊಂಡಿದ್ದಾರೆ –

ಅಂದರೆ ಆಕಾಶವನ್ನು ನೋಡುತ್ತಾ ಎಚ್ಚರವಾಗಿರಬೇಕು !!

ವಿಶೇಷವಾಗಿ ಮೋಡ ವಾತಾವರಣದ ಸಮಯಗಳಲ್ಲಿ....

.... ಮತ್ತು ಮಳೆ ಕಾಲದಲ್ಲಿ!!

**ಇದು ಸರಿಯಾದ ಆಲೋಚನೆಯಾ ಮತ್ತು ಮುಕ್ತಾಯ (ವಾಕ್ಯ)ವಾಗಿ ತೆಗೆದುಕೊಳ್ಳಬೇಕಾ?**

**ಇದಕ್ಕೆ ಉತ್ತರ - ಇಲ್ಲ !!!**

ನಾವು ಕಳೆದ ಅಭ್ಯಾಸದಲ್ಲಿ (ಅಭ್ಯಾಸ # 42) ನೋಡಿದ ಹಾಗೆ ಕರ್ತನ ಎರಡನೆಯ ಬರುವಿಕೆಯು ನಮ್ಮ ಸಾಧಾರಣ ಕಣ್ಣುಗಳಿಂದ ನೋಡಲು ಸಾಧ್ಯವಿಲ್ಲ.

ಏಕೆಂದರೆ ಈಗ ಆತನು ಮಹಿಮೆಯುಳ್ಳ ದೈವೀಕ ಸ್ವಭಾವದಲ್ಲಿದ್ದಾನೆ ಮತ್ತು ಒಂದು ವೇಳೆ ಎಲ್ಲಾ ಶರೀರದ ಕಣ್ಣುಗಳು ಆತನನ್ನು ನೋಡಿದರೆ ತಾರ್ಸದ ಪೌಲನಂತೆ ಎಲ್ಲರೂ ಕುರುಡಾಗುತ್ತಾರೆ. ಏಕೆಂದರೆ ಆತನು ಕೆಲವು ಕ್ಷಣಗಳು ಮಾತ್ರ ಕರ್ತನ ಮಹಿಮೆಯನ್ನು ನೋಡಿ ಕುರುಡಾದನು !!

ಆದ್ದರಿಂದ ನಾವು "ಎಚ್ಚರ" ದಿಂದ ನೋಡಬೇಕಾದ ಕಣ್ಣು ಯಾವುದೆಂದರೆ –

ಆತ್ಮೀಕ ಕಣ್ಣು ಅಥವಾ **"ಮನೋನೇತ್ರ"**

ಹೌದು ! ಕರ್ತನು ಸೂಚಿಸಿರುವ ಎಚ್ಚರಿಕೆಯನ್ನು ಕುರಿತು ಈಗ ನೋಡೋಣ –

**2 ಪೇತ್ರನು 1 : 19**

**"ಇದಲ್ಲದೆ ಪ್ರವಾದನವಾಕ್ಯವು ನಮಗೆ ಬಹುದೃಢವಾಗಿ ದೊರೆತದೆ. ಆ ದಿನವು ಅರುಣೋದಯವಾಗುವರೆಗೆ ಮತ್ತು ಉದಯ ನಕ್ಷತ್ರವು ನಿಮ್ಮ ಹೃದಯಗಳಲ್ಲಿ ಮೂಡುವತನಕ ಅದನ್ನು ಕತ್ತಲೆಯಾದ ಸ್ಥಳದಲ್ಲಿ ಪ್ರಕಾಶಿಸುವ ದೀಪವೆಂದೆಣಿಸಿ ಅದಕ್ಕೆ ಲಕ್ಷ್ಯಕೊಟ್ಟರೆ ಒಳ್ಳೆಯದು."**

ಹೌದು ! ನೀವು ನೋಡಿದಿರಾ?

ಕರ್ತನು ನಮಗೆ ಸೂಚಿಸಿರುವ **"ಎಚ್ಚರಿಕೆ"**ಯ ಮಾತೆಂದರೆ –

**"ದೃಢವಾದ ಪ್ರವಾದನ ವಾಕ್ಯವು"**

**ಈ ವಿಷಯದಲ್ಲಿ ನಾವು "ಎಚ್ಚರ"ವಾಗಿರಬೇಕಾಗಿದೆ!!**

ಒಬ್ಬ ವ್ಯಕ್ತಿಗೆ **"ಪ್ರವಾದನ ವಾಕ್ಯ"**ವನ್ನು **"ಲಕ್ಷ್ಯ ಕೊಡ"**ಬೇಕೆಂದು


ಸೂಚಿಸಲಾಗಿದೆ ಏಕೆಂದರೆ ಪ್ರವಾದನ ಭಾಷೆಯಲ್ಲಿ ಬರೆದಿರುವ ದೇವರ ವಾಕ್ಯಗಳನ್ನು ಅರ್ಥಮಾಡಿಕೊಳ್ಳಲು **"ತಕ್ಕ ಕಾಲ"** ಬರಬೇಕೆಂದು ಕೆಳಗಿನ ವಾಕ್ಯಗಳ ಮೂಲಕ ನೋಡುತ್ತೇವೆ –

**ದಾನಿ 12:8-9**

**"ನನಗೆ ಕೇಳಿಸಿದರೂ ಅರ್ಥವಾಗಲಿಲ್ಲ. ಆಗ ನಾನು, "ಎನ್ನೊಡೆಯನೇ, ಈ ಕಾರ್ಯಗಳ ಪರಿಣಾಮವೇನು?" ಎಂದು ಪ್ರಶ್ನೆ ಮಾಡಲು, ಅವನು, "ದಾನಿಯೇಲನೇ, ಈ ಮಾತುಗಳು ಅಂತ್ಯಕಾಲದ ವರೆಗೆ ಮುಚ್ಚಲ್ಪಟ್ಟು ಮುದ್ರಿತವಾಗಿವೆ, ಹೋಗು."**

ಕರ್ತನಿಂದ ಆತನಿಗೆ ಹೇಳಲ್ಪಟ್ಟದ್ದೇನೆಂದರೆ ಆ ವಾಕ್ಯಗಳು

➡ **".......ಅಂತ್ಯಕಾಲದವರೆಗೆ ಮುಚ್ಚಲ್ಪಟ್ಟು ಮುದ್ರಿತವಾಗಿವೆ".**



ಆದ್ದರಿಂದ ಬಹಳ ಸ್ಪಷ್ಟವಾಗಿರುವದೇನೆಂದರೆ ದೇವರ ಪ್ರವಾದನ ವಾಕ್ಯಗಳನ್ನು ಅರ್ಥಮಾಡಿಕೊಳ್ಳಲು **"ತಕ್ಕಕಾಲ"** ಬರಬೇಕಾಗಿದೆ.

ಮತ್ತು ಅದೇ ರೀತಿ ನಮ್ಮ ಕರ್ತನ ಎರಡನೆಯ ಬರುವಿಕೆಯ ವಿಷಯವಾಗಿದೆ !!

**ಇದೇ "ಎಚ್ಚರಿಕೆ"ಯಾಗಿರಬೇಕೆಂದು ಕರ್ತನ ಆಜ್ಞೆಗೆ ನಿಜವಾದ ಅರ್ಥವಾಗಿದೆ.**

ಆದ್ದರಿಂದ **"ಎಚ್ಚರಿಕೆ"**ಯಾಗಿರು ಎಂದು ಕರ್ತನು ಸೂಚಿಸಿದ್ದು ಯಾತಕ್ಕಾಗಿ ಎಂದು ತಿಳಿದುಕೊಂಡ ಮೇಲೆ ನಾವು ದೇವರ ವಾಕ್ಯವೆಂಬ **"ದೀಪ"**ದಿಂದ ಬೆಳಕನ್ನು ನೋಡಬೇಕಾಗಿದೆ !!

ಹೌದು !  ನಾವು ಕರ್ತನ ಎರಡನೆ ಬರುವಿಕೆಯ ವಿಷಯವನ್ನು ಸತ್ಯವೇದದಲ್ಲಿ ಸೂಚಿಸಿರುವ ಎಲ್ಲಾ ವಾಕ್ಯಗಳಲ್ಲಿ ಅಭ್ಯಾಸ ಮಾಡುವಾಗ ನಾವು ಏನೋ ಆತ್ಯಾಸಕ್ತಿಯುಳ್ಳ ವಿಷಯವನ್ನು ನೋಡುತ್ತೇವೆ !!

**ಇದನ್ನು ನಾವು ಆಂಗ್ಲ ಭಾಷೆ ಅಥವಾ ಬೇರೆ ಭಾಷೆಯ ಸತ್ಯವೇದದಲ್ಲಿ ನೋಡುವದಿಲ್ಲ ಅಥವಾ ಗುರುತಿಸಲು ಸಾಧ್ಯವಿಲ್ಲ !!**

**ಇವನ್ನು ಹೊಸ ಒಡಂಬಡಿಕೆಯ ಮೂಲಭಾಷೆಯಾದ ಗ್ರೀಕ್‌ನಲ್ಲಿ ಮಾತ್ರ ನಾವು ನೋಡುತ್ತೇವೆ !**

ಹೌದು ! ಎರಡನೆಯ ಬರುವಿಕೆಯನ್ನು ಕುರಿತು ಈ ಎಲ್ಲಾ ವಾಕ್ಯಗಳಲ್ಲಿ ಮೂರು ಪ್ರಮುಖ ವಾಕ್ಯಗಳನ್ನು ಉಪಯೋಗಿಸಲಾಗಿದೆ !

ಈ ಮೂರು ಪದಗಳು ಬಹಳ ವ್ಯತ್ಯಾಸವುಳ್ಳ ಅರ್ಥಗಳನ್ನು ಕೊಡುತ್ತದೆ. ಆದರೆ ಈ ಮೂರು ಗ್ರೀಕ್ ಪದಗಳು ಮತ್ತು ಅದಕ್ಕೆ ಸಂಬಂಧಿಸಿದ ವಾಕ್ಯಗಳು ಈ ವಿಷಯದಲ್ಲಿ ಮಹಾ ಸತ್ಯ ಮತ್ತು ಬೆಳಕನ್ನು ನೀಡುತ್ತದೆ !

ದೇವರು ಹೊಸ ಒಡಂಬಡಿಕೆಯನ್ನು ಬರೆಯಲು ಗ್ರೀಕ್ ಭಾಷೆಯು ಹೆಸರಾಂತ ವಾಗಿದ್ದು ಮಾತ್ರ ಕಾರಣವಲ್ಲ ಆದರೆ ಗ್ರೀಕ್ ಭಾಷೆಯ ಪದಗಳು ನಿರ್ಧಿಷ್ಟವಾದ ಅರ್ಥಗಳನ್ನು ಕೊಡುತ್ತದೆ.

ಆದ್ದರಿಂದ ಪೂರ್ಣಸತ್ಯಗಳನ್ನು ಈ ಭಾಷೆಯ ತಿಳಿಸುತ್ತದೆಯೇ ಹೊರತು ಅದನ್ನು ವಿಕೃತ (ವಿರೂಪ) ಗೊಳಿಸುವದಿಲ್ಲ !

ಈಗ ನಾವು ಆ ಮೂರು ಪದಗಳನ್ನು ಕುರಿತು ನೋಡೋಣ :

| ಗ್ರೀಕ್ ಪದ | ಆಂಗ್ಲದಲ್ಲಿ ಅರ್ಥ |
|---|---|
| **ಪರೌಸಿಯಾ** | ಅಂದರೆ "ಪ್ರತ್ಯಕ್ಷತೆ" |
| **ಎಪಿಫೇನಿಯಾ** | ಅಂದರೆ "ಪ್ರಕಾಶವಾಗಿ ಹೊಳೆಯುವದು" |
| **ಅಪೋಕಲುಪ್ಸಿಸ್** | ಅಂದರೆ "ಪ್ರಕಟವಾಗುವದು/ಬಹಿರಂಗಪಡಿಸುವದು" |

ಈ ದಿನಗಳಲ್ಲಿ ಕಂಕಾರ್ಡಂಸಸ್ (Concordances) ಮತ್ತು ಗ್ರೀಕ್‌ನಿಂದ ನೇರವಾಗಿ ಆಂಗ್ಲದಲ್ಲಿ ಎಂಫಾಟಿಕ್ ಡೈಯಾಗ್ಲಾಟ್ (Emphatic Diaglott) ಗಳ ಮೂಲಕ ಸತ್ಯವೇದದ ವಿದ್ಯಾರ್ಥಿಯು ಸುಲಭವಾಗಿ ಸತ್ಯವನ್ನು ಕಂಡುಕೊಳ್ಳಬಹುದು !

ಈಗ ನಾವು ಮೊದಲನೆಯ ಪದದ ಅರ್ಥವನ್ನು ಕುರಿತು ಅಭ್ಯಾಸಿಸೋಣ –

# 1. ಪರೌಸಿಯಾ

ಈ ಗ್ರೀಕ್ ಪದದ ಅರ್ಥವೇನೆಂದರೆ **"ಪ್ರತ್ಯಕ್ಷ"** ಮತ್ತು ಹೊಸ ಒಡಂಬಡಿಕೆಯಲ್ಲಿ 24 ಸಾರಿ ಬರುತ್ತದೆ. ಆದರೆ ಎರಡು ಸಲ ಮಾತ್ರ **"ಪ್ರತ್ಯಕ್ಷ"** ಎಂದು ಸರಿಯಾಗಿ ಭಾಷಾಂತರಿಸಲಾಗಿದೆ.

ಆದರೆ **ಉಳಿದ 22 ಸಲ** ಇದನ್ನು **"ಬರುವನು" ಎಂದು ತಪ್ಪಾಗಿ ಭಾಷಾಂತರಿಸಲಾಗಿದೆ.**

**ಈಗ "ಪ್ರತ್ಯಕ್ಷ" ಮತ್ತು "ಬರುವನು" ಎಂಬ ಪದಗಳಲ್ಲಿ ಬಹಳ ವ್ಯತ್ಯಾಸವುಳ್ಳ ಅರ್ಥಗಳನ್ನು ಕೊಡುತ್ತದೆ.**

"ಬರುವನು" ಎಂಬ ಪದವು ಇನ್ನೂ ನಿರೀಕ್ಷಿಸುತ್ತಿರುವ ಅರ್ಥ ಕೊಡುತ್ತದೆ ಮತ್ತು ನಿಜವಾಗಿಯೂ ಇನ್ನೂ ಪ್ರಸ್ತುತವಾಗಲಿಲ್ಲ – ಭವಿಷ್ಯದ ಸಂಗತಿಗಾಗಿ ನಿರೀಕ್ಷಿಸಲಾಗುತ್ತಿದೆ ಎಂದು ಅರ್ಥ ಕೊಡುತ್ತದೆ !

ಆದರೆ **"ಪ್ರತ್ಯಕ್ಷ"** ಎಂದರೆ ಈಗಾಗಲೇ ಬಂದಾಗಿದೆ ಮತ್ತು ಹಾಜರಿದ್ದಾರೆ ಎಂದು ಅರ್ಥ ಕೊಡುತ್ತದೆ.

**ನಿಜವಾಗಿಯೂ ಎಂತಹ ವ್ಯತ್ಯಾಸವುಳ್ಳ ಪದಗಳಾಗಿವೆ!**

ಈಗ ನಾವು ಕೆ.ಜೆ.ವಿ. ಆಂಗ್ಲ ಭಾಷೆಯಲ್ಲಿ **"ಪ್ರತ್ಯಕ್ಷ"** ಎಂದು (Parousia) ಸರಿಯಾಗಿ ಭಾಷಾಂತರಿಸಿರುವ ಎರಡು ವಾಕ್ಯಗಳೊಂದಿಗೆ ನಮ್ಮ ಅಭ್ಯಾಸವನ್ನು ಆರಂಭಿಸೋಣ.

ಈಗ ನಾವು ಮೊದಲ ವಾಕ್ಯವನ್ನು ನೋಡೋಣ –

**ಫಿಲಿಪ್ಪಿಯವರಿಗೆ 2 : 12**

**"ನೀವು ನನ್ನ ಮಾತನ್ನು ಯಾವಾಗಲೂ ಕೇಳಿದಂತೆಯೇ ಈಗಲೂ ಕೇಳಿರಿ. ನಾನು ನಿಮ್ಮಲ್ಲಿರುವಾಗ (ಪರೌಸಿಯಾ) ಮಾತ್ರವಲ್ಲದೆ"**

ಹೌದು ! ಇಲ್ಲಿ "ನಿಮ್ಮಲ್ಲಿರುವಾಗ" ಎಂಬ ಪದವು **"ಪರೌಸಿಯಾ"** ಎಂಬ ಗ್ರೀಕ್ ಪದದಿಂದ ಭಾಷಾಂತರಿಸಲಾಗಿದೆ – ನಂತರ ಮತ್ತೆ ಇದನ್ನೇ ಕೆಳಗಿನ ವಾಕ್ಯದಲ್ಲಿ ಓದುತ್ತೇವೆ –

**2 ಕೊರಿಂಥದವರಿಗೆ 10 : 10**

**"ಅವರಿಂದ ಬಂದ ಪತ್ರಿಕೆಗಳು ಗೌರವಾದವುಗಳೂ ಬಲವುಳ್ಳವುಗಳೂ ಆಗಿವೆ; ಅವನು ಸಾಕ್ಷಾತ್ತಾಗಿ ಬಂದರೆ ಅವನು ನಿರ್ಬಲನು......"**

ಹೌದು ! ಮತ್ತೆ ಇಲ್ಲಿ ಗ್ರೀಕ್ ಪದ **"ಪರೌಸಿಯಾ"** ವನ್ನು ಸರಿಯಾಗಿ **"ಪ್ರತ್ಯಕ್ಷ"** ಎಂದು ಭಾಷಾಂತರಿಸಲಾಗಿದೆ.

[ ತಮಿಳು ಭಾಷೆ ಸತ್ಯವೇದದಲ್ಲಿ – **"ಪ್ರಸನ್ನಂ"** ಎಂಬ ತಮಿಳು ಪದದ ಅರ್ಥವು **"ಪ್ರತ್ಯಕ್ಷತೆ"** ಯಾಗಿದ್ದು, ಬೇರೆ ಅದೇ ರೀತಿಯಾದ ಪದಗಳನ್ನು ಬದಲಿಸಲಾಗಿದೆ. ಆಂಗ್ಲ ಭಾಷೆಯಲ್ಲಿ ಸ್ಥಿರವಾಗಿ ಉಪಯೋಗಿಸುವಂತೆ ಒಂದೇ ಪದವನ್ನು ಬೇರೆ ಭಾಷೆಗಳಲ್ಲಿಯೂ ಉಪಯೋಗಿಸಿದ್ದರೆ ಚೆನ್ನಾಗಿತ್ತು ]

ಆದರೆ ನಾವು ನೋಡುವದೇನೆಂದರೆ ಈ ಎರಡೂ ವಾಕ್ಯಗಳಿಗೂ ನಮ್ಮ ಕರ್ತನ ಎರಡನೆಯ ಬರುವಿಕೆಗೂ ಯಾವ ಸಂಬಂಧವೂ ಇಲ್ಲ.

ಅದೇ ರೀತಿ ಇನ್ನೂ 4 ವಾಕ್ಯಗಳಲ್ಲಿ **"ಪ್ರತ್ಯಕ್ಷ"** **(Parousia)** ಎಂದು ಬರುತ್ತದೆ ಆದರೆ ತಪ್ಪಾಗಿ **"ಬರುವಿಕೆ"** ಎಂದು ಭಾಷಾಂತರಿಸಲಾಗಿದೆ – ಆದರೆ ವಾಸ್ತವವಾಗಿ **"ಪ್ರತ್ಯಕ್ಷತೆ"** **(presence)** ಎಂದು ಬರಬೇಕಾಗಿತ್ತು.

ಈಗ ಆ ನಾಲ್ಕು ವಾಕ್ಯಗಳನ್ನು ಕುರಿತು ನೋಡೋಣ –

**2 ಕೋರಿಂಥದವರಿಗೆ 7 : 6** – **"ಆದಾಗ್ಯೂ ಕುಗ್ಗಿಹೋದ ವರನ್ನು ಸಂತೈಸುವ ದೇವರು ತೀತನ ಬರುವಿಕೆಯಿಂದ ನಮ್ಮನ್ನು ಸಂತೈಸಿದನು."**

**2 ಕೋರಿಂಥದವರಿಗೆ 7 : 7** - **"ಅವನ ಬರುವಿಕೆಯಿಂದಮಾತ್ರವಲ್ಲದೆ ಅವನು ... ತಾನು ನಿಮ್ಮಲ್ಲಿ ಹೊಂದಿದ ಆದರಣೆ ಇವುಗಳನ್ನು ನಮಗೆ ತಿಳಿಸಿದಾಗ ನಾನು ಹೆಚ್ಚಾಗಿ ಸಂತೋಷಪಟ್ಟೆನು."**

1 ಕೋರಿಂಥದವರಿಗೆ 16 : 17 - “ಸ್ತೆಫನನೂ ಫೊರ್ತುನಾತನೂ ಅಖಾಯಿಕನೂ ಬಂದದರಿಂದ ನನಗೆ ಸಂತೋಷ ವಾಯಿತು.”

ಫಿಲಿಪ್ಪಿಯವರಿಗೆ 1 : 26 - “ಹೀಗೆ ನಾನು ತಿರಿಗಿ ನಿಮ್ಮ ಬಳಿಗೆ ಬರುವದರಿಂದ ನನ್ನ ವಿಷಯವಾದ ನಿಮ್ಮ ಸಂತೋಷವು ಯೇಸು ಕ್ರಿಸ್ತನಲ್ಲಿ ನಮಗೆ ಅತ್ಯಧಿಕವಾಗಿರುವದು.”

ಹೌದು ! ಈ ಮೇಲಿನ ಎಲ್ಲಾ ವಾಕ್ಯಗಳಲ್ಲಿ “**ಬರುವಿಕೆ**” ಎಂದು ಭಾಷಾಂತರಿಸಲಾಗಿದೆ ಇದಕ್ಕೆ ಬದಲು – “**ಪ್ರತ್ಯಕ್ಷತೆ**” ಎಂದು ಬರಬೇಕಿತ್ತು ಏಕೆಂದರೆ ಎಲ್ಲಾ ಸ್ಥಳಗಳಲ್ಲಿಯೂ ಗ್ರೀಕ್ ಪದವಾದ “**ಪರೌಸಿಯಾ**” ಎಂದು ಬರುತ್ತದೆ.

ಆದರೆ ಮತ್ತೆ ಈ ವಾಕ್ಯಗಳೂ ಸಹ ಕರ್ತನ ಎರಡನೆಯ ಬರುವಿಕೆಗೆ ಸಂಬಂಧ ಪಟ್ಟದ್ದಲ್ಲ ಆದರೆ "**ಪರೌಸಿಯಾ**" ಎಂಬ ಪದದ ತಪ್ಪಾದ ಭಾಷಾಂತರಕ್ಕೆ ಉದಾಹರಣೆಗಳಾಗಿವೆ.

ಈಗ ನಾವು ಹೊಸ ಒಡಂಬಡಿಕೆಯಲ್ಲಿ “**ಪರೌಸಿಯಾ**” ಎಂದು ಬರುವ ಬೇರೆ 17 ವಾಕ್ಯಗಳನ್ನು ಕುರಿತು ನೋಡೋಣ ಮತ್ತು ಈ ವಾಕ್ಯಗಳೆಲ್ಲವೂ

ಕರ್ತನ ಎರಡನೆಯ ಬರುವಿಕೆಗೆ ಸಂಬಂಧಪಟ್ಟದ್ದಾಗಿದೆ !!

ಈಗ ನಾವು ಕೆಳಗಿನ ವಾಕ್ಯದೊಂದಿಗೆ ಆರಂಭಿಸೋಣ –

## ಮತ್ತಾಯ 24 : 3

“ಆತನು ಎಣ್ಣೇಮರಗಳ ಗುಡ್ಡದ ಮೇಲೆ ಕೂತುಕೊಂಡಾಗ ಶಿಷ್ಯರು ಪ್ರತ್ಯೇಕವಾಗಿ ಆತನ ಬಳಿಗೆ ಬಂದು--ಇವು ಯಾವಾಗ ಆಗುವವು? ಮತ್ತು ನಿನ್ನ ಬರೋಣಕ್ಕೂ ಲೋಕವು ಅಂತ್ಯವಾಗುವದಕ್ಕೂ ಸೂಚನೆ ಏನು?....”



ಹೌದು ! ಇದು ಮೊಟ್ಟಮೊದಲ ಸಲ ಶಿಶ್ಯರು ಕರ್ತನಿಗೆ ಆತನ ಎರಡನೆಯ ಬರುವಿಕೆಯ ಬಗ್ಗೆ ವಿಚಾರಣೆ ಮಾಡುತ್ತಾರೆ !!

ಇಲ್ಲಿ ಗ್ರೀಕ್ ಪದವಾದ **"ಪರೌಸಿಯಾ"** ದ ಅರ್ಥ **"ಪ್ರತ್ಯಕ್ಷತೆ"** ಎಂದು ಈಗಾಗಲೇ ನಾವು ನೋಡಿದ್ದೇವೆ.

ಈಗ ಗ್ರೀಕ್ ಪದವಾದ **"ಪರೌಸಿಯಾ"** ಭಾಷಾಂತರವು ತಪ್ಪಾಗಿದೆ ಎಂದು ದೃಢ ಪಡಿಸಲು ಮತ್ತು ಇದರ ನಿಜವಾದ ಅರ್ಥ **"ಪ್ರತ್ಯಕ್ಷತೆ"** ಆಗಿದೆ.

ಆದರೆ ಆತನ **"ಬರುವಿಕೆ"** ಎಂದು (ಆಂಗ್ಲ ಭಾಷೆಯಲ್ಲಿ) ತಪ್ಪಾಗಿ ಭಾಷಾಂತರಿಸಿದೆ.
ಆದ್ದರಿಂದ – ಈಗ ಇನ್ನೊಂದು ಬೇರೆ ವಾಕ್ಯದಲ್ಲಿ **"ಪರೌಸಿಯಾ"** ಎಂಬ ಪದವು ಬರುತ್ತದೆ.
ಆದರೆ ಅದು ಕರ್ತನ ಎರಡನೆಯ ಬರುವಿಕೆಗೆ ಸಂಬಂಧಪಟ್ಟದ್ದಲ್ಲ.
ಆದರೆ ಮೊದಲನೆಯ ಬರುವಿಕೆಗೆ ಸಂಬಂಧ ಪಟ್ಟದ್ದಾಗಿದೆ !!

ಈಗ ನಾವು ಆ ವಾಕ್ಯವನ್ನು ಕುರಿತು ನೋಡೋಣ –

**2 ಪೇತ್ರನು 1 : 16**

**"ನಮ್ಮ ಕರ್ತನಾದ ಯೇಸು ಕ್ರಿಸ್ತನ ಶಕ್ತಿಯನ್ನೂ ಆತನ ಪ್ರತ್ಯಕ್ಷತೆಯನ್ನೂ ನಿಮಗೆ ತಿಳಿಯಪಡಿಸಿದ್ದರಲ್ಲಿ ಚಮತ್ಕಾರದಿಂದ ಕಲ್ಪಿಸಿದ ಕಥೆಗಳನ್ನು ನಾವು ಅನುಸರಿ ಸುವವರಾಗಿರಲಿಲ್ಲ. ಆತನ ಮಹತ್ತನ್ನು ಕಣ್ಣಾರೆ ಕಂಡವ ರಾಗಿಯೇ ತಿಳಿಯಪಡಿಸಿದೆವು."**




ಹೌದು ! ಇದು ಅಪೋಸ್ತಲನಾದ ಪೇತ್ರನು ಯೇಸು ಬೆಟ್ಟದ ಮೇಲೆ ಪ್ರಕಾಶ ರೂಪವನ್ನು ಧರಿಸಿದ್ದನ್ನು ನೆನಪಿಸಿಕೊಳ್ಳುತ್ತಾ ಮತ್ತಾಯ 17 : 1–9 ನ್ನು ದಾಖಲಾಗಿರುವದನ್ನು ಸಾಕ್ಷಿಯಾಗಿ ಹೇಳುತ್ತಾನೆ.

ಆದ್ದರಿಂದ **"ಪರೌಸಿಯಾ"** ಎಂದು ಉಪಯೋಗಿಸಿರುವ ಗ್ರೀಕ್ ಪದದ ಅರ್ಥ **"ಪ್ರತ್ಯಕ್ಷತೆ"** ಯಾಗಿದೆ ಎಂದು ಹೇಳುತ್ತಾರೆ.

**ಆದರೆ ನಾವು ನೋಡುವುದೇನೆಂದರೆ ಭಾಷಾಂತರಿಸುವವರು "ಬರುವಿಕೆ" ಎಂದು ತಪ್ಪಾಗಿ ಭಾಷಾಂತರಿಸಿದ್ದಾರೆ, ಈ ವಿಚಾರವು ಸಂಪೂರ್ಣವಾಗಿ ಸೂಕ್ತವಲ್ಲ. ಯಾರಾದರೂ ಈ ವಾಕ್ಯದ ಸನ್ನಿವೇಶವನ್ನು ಓದಿ ಅರ್ಥ ಮಾಡಿಕೊಳ್ಳುವವರಿಗೆ ಗೊತ್ತಾಗುತ್ತದೆ!!**

ನಿಜಾಂಶವೇನೆಂದರೆ, **ರೊಥಹ್ಯಾರ್ಮ್ ಬೈಬಲ್** ಎಂದು ಹೆಸರಾಂತವಾಗಿ ಕರೆಯಲ್ಪಡುವ ಜೋಸೆಫ್ ರೊಥಹ್ಯಾರ್ಮ್ ರವರು ಭಾಷಾಂತರಿಸಿದ ಸತ್ಯವೇದದಲ್ಲಿ, ಈ ವಿಚಾರವು ಮನವರಿಕೆಯಾಗಿ, ಹೊಸ ಒಡಂಬಡಿಕೆಯಲ್ಲಿ ಇರುವ 24 ವಾಕ್ಯಗಳಲ್ಲಿಯೂ ಸ್ಥಿರವಾಗಿ "ಪರೌಸಿಯಾ" ಎಂಬ ಪದಕ್ಕೆ "ಪ್ರಸನ್ನತೆ" ಎಂದು ಭಾಷಾಂತರಿಸಿದ್ದಾರೆ.




ಈಗ ಈ ವಿಚಾರವನ್ನು ಅರ್ಥಮಾಡಿಕೊಂಡ ಮೇಲೆ, ಶಿಶ್ಯರ ಪ್ರಶ್ನೆಯನ್ನು ಕುರಿತು ಮತ್ತಾಯ 24:3 ರನ್ನು ನೋಡೋಣ!

ಈಗ ಈ ತಪ್ಪಾಗಿ ಭಾಷಾಂತರಿಸಿದ "ಬರುವಿಕೆ" ಎಂಬುದನ್ನು "ಪ್ರಸನ್ನತೆ" ಎಂದು ಸರಿಯಾಗಿ ಭಾಷಾಂತರಿಸಿದರೆ, ಅದೇ ವಾಕ್ಯ ಮತ್ತು ಪ್ರಶ್ನೆಯನ್ನು ನಾವು ಹೀಗೆ ಓದುತ್ತೇವೆ –

## ನೀನು ಪ್ರತ್ಯಕ್ಷನಾಗುವದಕ್ಕೂ ಯುಗದ ಸಮಾಪ್ತಿಗೂ ಸೂಚನೆಯೇನು?

ಆಹ್ ! ಈ ವಾಕ್ಯವನ್ನು ಓದುವಾಗ ಯೇಸು ನಮಗೆ ಎಂತಹ ಮಹತ್ತರವಾದ ಸುಳಿವು ನೀಡುತ್ತಾನೆ ಮತ್ತು ಆ ಅಧ್ಯಯನದ (ಅಧಿಕಾರದ) ಉಳಿದ ವಾಕ್ಯಗಳಲ್ಲಿ ಎರಡನೆಯ ಪ್ರತ್ಯಕ್ಷತೆಯ ನಿಜಾಂಶವನ್ನು ನೀಡುತ್ತಾನೆ ಮತ್ತು ಆತನ ಎರಡನೆಯ ಬರುವಿಕೆಯ ನಂತರ ನಡೆಯುವ ಸಂಗತಿಗಳನ್ನು ಕಂಡುಹಿಡಿಯಲು ಸಾಧ್ಯವಾಗುತ್ತದೆ !!

.......ಮತ್ತು ಆತನ ಬರುವಿಕೆಗೆ ಮೊದಲು ನಡೆಯುವ ಸಂಗತಿ ಅಲ್ಲ !!

ಹೌದು ! ಈ ಸೂಚನೆಗಳು ಬಹಳ ಅವಶ್ಯವಾಗಿದೆ ಏಕೆಂದರೆ ಆತನು ಹೇಗೆ ಬರುತ್ತಾನೆಂದು ಸ್ವತ: ಆತನೇ ಹೇಳುತ್ತಾನೆ –

**ಪ್ರಕಟನೆ 16 : 15**

"ಇಗೋ, ಕಳ್ಳನು ಬರುವಂತೆ ಬರುತ್ತೇನೆ..."

ಇಲ್ಲಿ ವ್ಯಕ್ತಪಡಿಸಿರುವ – **"ಕಳ್ಳನು ಬರುವಂತೆ ಬರುತ್ತೇನೆ"** ಎಂಬುದು ಸೂಚಿಸುವದೇನೆಂದರೆ ಕಳ್ಳನು ಬರುವ ಹಾಗೆಯೇ ಆತನ ಬರುವಿಕೆಯು ಲೋಕದ ಎಲ್ಲಾ ಜನರಿಗೆ ತಿಳಿಯದೆಯೂ ಮತ್ತು ಕಣ್ಣಿಗೆ ಕಾಣದೆಯೂ ಇರುವದು.

ಹೌದು ! ಸತ್ಯವೇದವು ಸ್ಪಷ್ಟವಾಗಿ ಬೋಧಿಸುವದೇನೆಂದರೆ ಕರ್ತನು ಇನ್ನು ಮಾಂಸದಲ್ಲಿ (ಶರೀರದಲ್ಲಿ) ಇಲ್ಲವೆಂದು ಕೆಳಗಿನ ವಾಕ್ಯದಲ್ಲಿ ಓದುತ್ತೇವೆ –

2 **ಕೋರಿಂಥದವರಿಗೆ** 5 : 16 – "......ಕ್ರಿಸ್ತನನ್ನು ಕೂಡ ನಾವು ಶರೀರ ಸಂಬಂಧವಾಗಿ ತಿಳಿದಿದ್ದರು ಇನ್ನು ಮುಂದೆ ಆತನನ್ನು ಹಾಗೆ ತಿಳುಕೊಳ್ಳುವುದಿಲ್ಲ".

ಅಪೋಸ್ತಲನಾದ ಪೌಲನು ನಮಗೆ ಸ್ಪಷ್ಟವಾಗಿ ಹೇಳುವದೇನೆಂದರೆ ಕರ್ತನನ್ನು ಇನ್ನು ನಾವು ಶರೀರಧಾರಿ ಎಂದು ಅಂದುಕೊಳ್ಳಬಾರದು.

ಇದು ಅಪೋಸ್ತಲನಾದ ಪೇತ್ರನ ವಾಕ್ಯದಿಂದ ಇನ್ನೂ ದೃಢವಾಗುತ್ತದೆ –

1 ಪ್ರೇತನು 3 : 18 - "........ ಒಂದೇ ಸಾರಿ ಪಾಪನಿವಾರಣಕ್ಕೋಸ್ಕರ ಬಾಧೆಪಟ್ಟು ಸತ್ತನು. ಆತನು ಶರೀರ ಸಂಬಂಧದಲ್ಲಿ ಕೊಲ್ಲಲ್ಪಟ್ಟನು, ಆತ್ಮಸಂಬಂಧದಲ್ಲಿ ತಿರಿಗಿ ಬದುಕುವವನಾದನು".

ಹೌದು ! ನಿಜವಾಗಿಯೂ ಕರ್ತನು ಆತ್ಮೀಕ ಜೀವಿ ಮಾತ್ರವಲ್ಲ, ಆದರೆ ಪರಲೋಕದ ತಂದೆಯಂತೆ ಅದೇ ಸ್ವಭಾವದಲ್ಲಿ ಶಕ್ತಿಶಾಲಿಯಾಗಿದ್ದಾನೆ ಎಂದು ಕೆಳಗಿನ ವಾಕ್ಯದಲ್ಲಿ ಓದುತ್ತೇವೆ.

## ಯೋಹಾನ 5 : 26

"ತಂದೆಯು ಹೇಗೆ ಸ್ವತ: ಜೀವವುಳ್ಳವನಾಗಿದ್ದಾನೋ ಹಾಗೆಯೇ ಮಗನೂ ಸ್ವತ: ಜೀವವುಳ್ಳವನಾಗಿರುವಂತೆ ಮಾಡಿದನು."

ಓಹ್ ! ಹೌದು ! ನಿಜವಾಗಿಯೂ ಎಂತಹ ಆಶ್ಚರ್ಯವಾದ ವಿಷಯ !

**ಆದ್ದರಿಂದ ಯೇಸು ಈ ದೈವೀಕ ಸ್ವಭಾವದಲ್ಲಿ ಭೂಮಿಗೆ ಎರಡನೆ ಬಾರಿ ಬರುವನು!**

ಆದ್ದರಿಂದ ಆತನು ತನ್ನ ಎರಡನೆ ಬರುವಿಕೆಯ ಬಗ್ಗೆ ಕೆಳಗಿನ ವಾಕ್ಯದಲ್ಲಿ ಹೀಗೆ ಬೋಧಿಸುತ್ತಾನೆ –

## ಮತ್ತಾಯ 24 : 26-27

"ಆದಕಾರಣ ಅವರು ನಿಮಗೆ--ಇಗೋ, ಆತನು ಅಡವಿಯಲ್ಲಿದ್ದಾನೆಂದು ಹೇಳಿದರೆ ಹೋಗಬೇಡಿರಿ; ಇಗೋ, ಆತನು ಗುಪ್ತವಾದ ಕೋಣೆಗಳಲ್ಲಿದ್ದಾನೆಂದು ಹೇಳಿದರೆ ಅದನ್ನು ನಂಬಬೇಡಿರಿ. ಯಾಕಂದರೆ ಮಿಂಚು ಪೂರ್ವದಿಂದ ಹೊರಟು ಬಂದು ಪಶ್ಚಿಮದವರೆಗೆ ಹೊಳೆಯುವಂತೆಯೇ ಮನುಷ್ಯಕುಮಾರನ ಬರೋಣವೂ ಇರು ವದು."

ಹೌದು! ಇಲ್ಲಿ ಮೊದಲನೆಯದಾಗಿ ಕರ್ತನು ತನ್ನ ಎರಡನೆ ಬರುವಿಕೆಯ ಬಗ್ಗೆ ಇರುವ ಅನೇಕ ವಂಚನೆಗಳನ್ನು ಕುರಿತು ತನ್ನ ಶಿಷ್ಯರಿಗೆ ಎಚ್ಚರಿಸುತ್ತಾನೆ.

### ಈ ವಂಚನೆಗಳು ಯಾವುದು?

ಇದನ್ನು ನೇರವಾದ ಭಾಷೆಯಲ್ಲಿ ತೆಗೆದುಕೊಂಡರೆ, ಆತನ ಎರಡನೆ ಬರುವಿಕೆ ಮತ್ತು ಪ್ರಸನ್ನತೆಯು

ಕಣ್ಣಿಗೆ ಕಾಣುತ್ತದೆ

ಎಂದು ಹೇಳುವವರ ವಿರುದ್ಧವಾಗಿ ಎಚ್ಚರಿಸುವ ಹಾಗೆ ತೋರುತ್ತದೆ!!

**........ಅಥವಾ ಖಾಸಗಿ (Private) ವಿಷಯುವಾಗಿದ್ದು, ಆತನು ಆಯ್ದ ಕೆಲವರಿಗೆ ಮಾತ್ರ ತನ್ನನ್ನು ಕಾಣಿಸಿಕೊಳ್ಳುವಂತೆ ವ್ಯಕ್ತಪಡಿಸುತ್ತಾನೆ !**

ಹೌದು ! ಕರ್ತನು ಆತನ ಎರಡನೆಯ ಬರುವಿಕೆಯ ಬಗ್ಗೆ ಇರುವ ಇಂತಹ ಯೋಚನೆಗಳ ವಿರುದ್ಧ ಸ್ಪಷ್ಟವಾಗಿ ಎಚ್ಚರಿಸಿ ಹೇಳುವದೇನೆಂದರೆ –

**"............... ಹೊರಟುಹೋಗಬೇಡಿರಿ......."**

**"............. ನಂಬಬೇಡಿರಿ ..............."**

ಆದರೆ ಕರ್ತನ ಈ ವಾಕ್ಯಗಳನ್ನು ಇನ್ನು ಆಳವಾಗಿ ಯೋಚಿಸಿ ನೋಡಿದರೆ ಕರ್ತನು ಸಾಂಕೇತಿಕ ಭಾಷೆಯಲ್ಲಿ ಏನೋ ನಿಗದಿತವಾಗಿ ಹೇಳುತ್ತಿದ್ದಾನೆಂದು ನಮಗೆ ಮನವರಿಕೆ ಯಾಗುತ್ತದೆ !!

**ಹೌದು ! ಆತನ ಎರಡನೆಯ ಬರುವಿಕೆ ಮತ್ತು ಪ್ರತ್ಯಕ್ಷತೆಯ ಸಮಯದಲ್ಲಿ ನಿಗದಿತವಾದ ವಂಚನೆಗಳ ವಿಧಗಳಲ್ಲಿ ಒಳಗಾಗುವರು ಎಂದು ಹೇಳುತ್ತಾನೆ !!**

ಈಗ ನಾವು ಇದರ ಸಾಂಕೇತಿಕ ಅರ್ಥಗಳನ್ನು ಕುರಿತು ನೋಡೋಣ –

**"........... ಆಗೋ ಕ್ರಿಸ್ತನು ಅಡವಿಯಲ್ಲಿ ಇದ್ದಾನೆಂದು ಹೇಳಿದರೆ ಹೊರಟು ಹೋಗಬೇಡಿರಿ".**

ಇಲ್ಲಿ "**ಅಡವಿ**" (ಆಂಗ್ಲಭಾಷೆಯಲ್ಲಿ desert/ಮರುಭೂಮಿ") ಎಂದರೆ ಗ್ರೀಕ್ ಪದವಾದ – "**ಇರೆಮೋಸ್ (eremos)**" (**ಸ್ಟ್ರಾಂಗ್ಸ್ ಗ್ರೀಕ್** # 2048). ಇದೇ ಪದವನ್ನು ಪ್ರಕಟನೆ 12 : 6 ರಲ್ಲಿ ಉಪಯೋಗಿಸಿ 'ಅರಣ್ಯ' ಎಂದು ಭಾಷಾಂತರಿಸಲಾಗಿದೆ.

**"ಆ ಸ್ತ್ರೀಯು ಅರಣ್ಯಕ್ಕೆ ಓಡಿಹೋದಳು".**

"ಅರಣ್ಯ" ವೆಂದರೆ ಬೇರ್ಪಟ್ಟ ಸ್ಥಿತಿಯನ್ನು ಸೂಚಿಸುತ್ತದೆ.

ಆದ್ದರಿಂದ ಇದು ಕೆಲವು ಕ್ರೈಸ್ತ ವರ್ಗದವರು ತಿರುಗಿ ಬಂದ ಕರ್ತನೊಂದಿಗೆ ವಿಶೇಷವಾದ ಮತ್ತು ಪ್ರತ್ಯೇಕವಾದ ಮತ್ತು ಕೆಲವು ನಿರ್ಧಿಷ್ಟವಾದ ಸ್ಥಳಗಳಲ್ಲಿ ಐಕ್ಯತೆಯನ್ನು ಹೊಂದಿರುತ್ತಾರೆ ಎಂದು ಹಕ್ಕು ಸಾಧಿಸುತ್ತಾರೆ!!

ಕರ್ತನ ಎಚ್ಚರಿಕೆಯು ಸ್ಪಷ್ಟವಾಗಿದೆ –

"......ಹೊರಟು ಹೋಗಬೇಡಿರಿ......"

ಮತ್ತು ನಂತರ ನಾವು ಹೀಗೆ ಓದುತ್ತೇವೆ .........

**"..........ಇಗೋ ಕೋಣೆಗಳಲ್ಲಿದ್ದಾನೆಂದು ಹೇಳಿದರೆ ನಂಬಬೇಡಿರಿ"**

ಇಲ್ಲಿ **"ಕೋಣೆಗಳಲ್ಲಿ"** ಎಂಬ ಕರ್ತನ ವಾಕ್ಯವು ಮತ್ತಾಯ 6:6 ಕ್ಕೆ ಸಂಬಂಧವಿದೆ – **"ನೀನು ಪ್ರಾರ್ಥನೆಮಾಡುವಾಗ ನಿನ್ನ ಕೋಣೆಯೊಳಗೆ ಹೋಗಿ ಬಾಗಿಲನ್ನು ಮುಚ್ಚಿಕೊಂಡು ಅಂತರಂಗದಲ್ಲಿರುವ ನಿನ್ನ ತಂದೆಗೆ ಪ್ರಾರ್ಥನೆಮಾಡು. ಅಂತರಂಗದಲ್ಲಿ ನಡೆಯುವುದನ್ನು ನೋಡುವ ನಿನ್ನ ತಂದೆಯು ನಿನಗೆ ಫಲಕೊಡುವನು. "**

ಇದು ಅದೇ ಗ್ರೀಕ್ ಪದವಾಗಿದೆ – **"ಟೆಮ್‌ನೊ"** (temno) (**ಸ್ಟ್ರಾಂಗ್ಸ್ ಗ್ರೀಕ್** # 5009) ಮತ್ತು ಇದರ ಅರ್ಥವೇನೆಂದರೆ **"ಏಕಾಂತವಾದ ಕೋಣೆ"** **(a private chamber)**

ಇದು ನಮ್ಮ ಕರ್ತನ ವಾಕ್ಯದ ಪ್ರಕಾರ ವ್ಯಕ್ತಿಗತವಾಗಿ ಪ್ರಾರ್ಥಿಸುವ ಸ್ಥಿತಿಯನ್ನು ಸೂಚಿಸುವ ಸಂಕೇತವಾಗಿದೆ !!

ಕೆಲವರು ಕರ್ತನನ್ನು ನೋಡಿದ್ದಾಗಿಯೂ ಮತ್ತು ವೈಯಕ್ತಿಕವಾಗಿ ಭೇಟಿ ಯಾಗಿದ್ದಾಗಿಯೂ ಅಥವಾ ಪ್ರಾರ್ಥನೆಯ ಸಮಯದಲ್ಲಿ ಮಾತನಾಡಿದ್ದಾಗಿಯೂ ಹೇಳಿಕೊಳ್ಳುತ್ತಾರೆ (ಹಕ್ಕು ಸಾಧಿಸುತ್ತಾರೆ) ಎಂದು ಕರ್ತನು ಎಚ್ಚರಿಸುತ್ತಾನೆ.

ಕರ್ತನ ಎಚ್ಚರಿಕೆಯು ಸ್ಪಷ್ಟವಾಗಿದೆ –

"......ನಂಬಬೇಡಿರಿ..."

ಹೌದು ! ನಂತರ ಕರ್ತನು ತಾನು ಬರುವ ರೀತಿಯನ್ನು ಕುರಿತು ವಿವರಿಸುತ್ತಾನೆ –

**ವಾಕ್ಯ** – 27 – **"ಹೇಗೆ ಮಿಂಚು ಮೂಡಣದಲ್ಲಿ ಹುಟ್ಟಿ ಪಡುವಣದವರೆಗೂ ಕಾಣಿಸುತ್ತದೋ ಹಾಗೆಯೇ ಮನುಷ್ಯಕುಮಾರನ ಪ್ರತ್ಯಕ್ಷತೆಯು ಇರುವುದು".**

ಹೌದು ! ಇಲ್ಲಿ ಕರ್ತನು ವಿವರಿಸಿ ಹೇಳುವದೇನೆಂದರೆ ಆತನ ಎರಡನೆಯ ಬರುವಿಕೆಯು ಹೀಗೆ ವ್ಯಕ್ತವಾಗುತ್ತದೆ –

"ಮಿಂಚು"

ಅದು ಮೂಡಣದಲ್ಲಿ ಹುಟ್ಟಿ ಪಡುವಣದವರೆಗೂ ಕಾಣಿಸುತ್ತದೋ ಹಾಗೆಯೇ

ಮನುಷ್ಯ ಕುಮಾರನ ಪ್ರತ್ಯಕ್ಷತೆಯು ಇರುವದು"

ಇಲ್ಲಿ ನಾವು ಮೊದಲು ಗಮನಿಸುವದೇನೆಂದರೆ **"ಮಿಂಚು" "ಪೂರ್ವದಿಂದ ಪಶ್ಚಿಮಕ್ಕೆ"** ಹೊಡೆಯುವದಿಲ್ಲ **(strike).**

ಅದಕ್ಕೆ ನಿರ್ದಿಷ್ಟವಾದ ದಿಕ್ಕು ಇರುವುದಿಲ್ಲ ಮತ್ತು ಅದು ಯಾವ ದಿಕ್ಕಿನಲ್ಲಾದರು ಹೊಡೆಯುತ್ತದೆ ಮತ್ತು ಮಿಂಚು ಒಂದು ವೇಳೆ ಪೂರ್ವದಲ್ಲಿ ಹೊಡೆದರೆ ಖಂಡಿತವಾಗಿಯೂ ಅದು ಪಶ್ಚಿಮದಲ್ಲಿ ಕಾಣಿಸುವುದಿಲ್ಲ !

ಮಿಂಚು ಹೊಡೆಯುವಾಗ ಸ್ವಲ್ಪ ದೂರದಲ್ಲಿ ಮಾತ್ರ ಕಾಣಿಸುತ್ತದೆ –

ಹೆಚ್ಚೆಂದರೆ ಕೆಲವು ಕಿಲೋಮೀಟರ್ ದೂರ ಮಾತ್ರ ಕಾಣಿಸುತ್ತದೆ !

**ಆದ್ದರಿಂದ ಈ ವಾಕ್ಯವು ಬಹಳ ವಿಚಿತ್ರವಾಗಿ ಕಾಣುತ್ತದೆ !**

ಹಾಗಾದರೆ ಇಲ್ಲಿರುವ ವಿಷಯವಾದರೂ ಏನು?

ನಾವು ಗ್ರೀಕ್ ಭಾಷೆಯಲ್ಲಿ ಇದರ ಅರ್ಥವನ್ನು ನೋಡೋಣ !

ಈ **"ಮಿಂಚು"** ಎಂಬ ಪದವು ಗ್ರೀಕ್ ಪದದಿಂದ ಭಾಷಾಂತರಿಸಲಾಗಿದೆ –

**"ಆಸ್ಟ್ರಾಪೆ"** ("astrape") **(ಸ್ಟ್ರಾಂಗ್ಸ್ ಗ್ರೀಕ್** # 796) **ಮತ್ತು ಅದರ ಅರ್ಥ "ಪ್ರಕಾಶವಾಗಿ ಹೊಳೆಯುವದು".**

ಮಿಂಚು ಕೂಡ **"ಪ್ರಕಾಶವಾಗಿ ಹೊಳೆಯುವ"**ದರಿಂದ ಇಲ್ಲಿ ಸೂಚಿಸಿರುವದಕ್ಕೆ ಬೇಗದಕ್ಕೆ ಏನೆಂದು ಕೆಳಗಿನ ವಾಕ್ಯದಲ್ಲಿ ಓದುತ್ತೇವೆ –

**"ಮೂಡಣದಲ್ಲಿ ಹುಟ್ಟಿ ಪಡುವಣದವರೆಗೂ ಕಾಣಿಸುತ್ತದೆ".**

ಆಹ್ ! ಹೌದು !

ಇದು ಸೂರ್ಯನನ್ನು ಮಾತ್ರ ಸೂಚಿಸಲು ಸಾಧ್ಯ !

ಇಲ್ಲಿ **"ಪ್ರಕಾಶವಾಗಿ ಹೊಳೆಯುವದು"** ಎಂಬುದು ಸೂರ್ಯನನ್ನು ಸೂಚಿಸುತ್ತದೆ.

(ಕನ್ನಡದಲ್ಲಿ "ಪರೌಸಿಯಾ"ಗೆ **"ಪ್ರತ್ಯಕ್ಷ"** ಎಂದು ಸರಿಯಾಗಿ ಭಾಷಾಂತರಿಸಲಾಗಿದೆ)

**ಕರ್ತನು ಹೇಳಿದ ವಾಕ್ಯಗಳನ್ನು ಸರಿಯಾಗಿ ಭಾಷಾಂತರದಲ್ಲಿ ತಿದ್ದಿದ ಮೇಲೆ -**

**ಆತನ ಎರಡನೆ ಬರುವಿಕೆಯ ರೀತಿ ಮತ್ತು ಸ್ವಭಾವದ ಮಹತ್ತಾದ ಸತ್ಯದ ಬಗ್ಗೆ ಮನವರಿಕೆಯಾಗುತ್ತದೆ !!**

ಆದ್ದರಿಂದ ಸರಿಯಾಗಿ ಭಾಷಾಂತರಿಸಿದ ವಾಕ್ಯವು ಹೀಗಿರಬೇಕು –

**ಹೇಗೆ ಸೂರ್ಯನು ಮೂಡಣದಲ್ಲಿ ಹುಟ್ಟಿ ಪಡುವಣದವರೆಗೆ ಕಾಣಿಸುತ್ತದೋ ಹಾಗೆಯೇ ಮನುಷ್ಯಕುಮಾರನ ಪ್ರತ್ಯಕ್ಷತೆಯು ಇರುವದು.**

**ಎಂತಹ ಮಹಾ ಸತ್ಯವಾಗಿದೆ !!**

ಹೌದು ! ಕರ್ತನು ನಮಗೆ ಹೇಳಿರುವದಕ್ಕೆ ಅರ್ಥವೇನೆಂದರೆ ಆತನ ಎರಡನೆಯ ಪ್ರತ್ಯಕ್ಷತೆಯಲ್ಲಿ ಸೂರ್ಯನು –

**ಅದು ವ್ಯಕ್ತವಾಗುತ್ತದೆ**

**.......ಮತ್ತು**

**ಗೋಚರವಾಗುತ್ತದೆ ಮತ್ತು ಗುರುತಿಸಬಹುದಾಗಿದೆ.**

ಹೌದು ! ಹೇಗೆ ಸೂರ್ಯನು ಉದಯವಾಗುವಾಗ, ಅದು ಕ್ರಮೇಣವಾಗಿದೆ ಆದರೆ ಅದು ಇಡೀ ಲೋಕಕ್ಕೆ ಉದಯವಾಗುತ್ತದೆ ಮತ್ತು ಶಕ್ತಿಯಿಂದ ತುಂಬಿರುತ್ತದೆ !!

ಸೂರ್ಯನು ಉದಯವಾಗುವಾಗ ಅದರ ಶಕ್ತಿ ಬಹಳ ಮೃದುವಾಗಿದ್ದು ಅದರ ಕಿರಣಗಳು ಶಾಂತವಾಗಿರುವದನ್ನು ನೀವು ನೋಡಿದ್ದೀರಾ?

ಆದರೆ ಸಮಯ ಕಳೆದಂತೆ ಅದರ ಬೆಳಕು ಮತ್ತು ಶಕ್ತಿಯು ಸ್ಥಿರವಾಗಿ ಹೆಚ್ಚುತ್ತಾ ಬರುತ್ತದೆ !!

**ಅದೇ ರೀತಿಯಲ್ಲಿ ಕರ್ತನ ಎರಡನೆಯ ಪ್ರತ್ಯಕ್ಷತೆಯಲ್ಲಿರುವದು !!**



**ಆತನ ಪ್ರತ್ಯಕ್ಷತೆಯ ಆರಂಭದಲ್ಲಿ ಅದು ಬಹುಶ: ಗುರುತಿಸಲಾಗದೆ ಇರುವದು ಆದರೆ ಇದರ ಮೂಲಕ ಆತನ ಪ್ರತ್ಯಕ್ಷತೆ ಮತ್ತು ಆಳ್ವಿಕೆಯು ಸರಳವಾಗಿ ಗೋಚರಿಸುತ್ತದೆ !!**

ಇನ್ನೊಂದು ಮುಖ್ಯವಾದ ವಿಷಯ ಗಮನಿಸಬೇಕಾದದ್ದೇನೆಂದರೆ ಸೂರ್ಯನು ಉದಯಿಸುವಾಗ ಯಾರ್ಯಾರು ಬೇಗನೆ ಎಚ್ಚೆತ್ತುಕೊಳ್ಳುತ್ತಾರೋ ಅಂಥವರು ಅದರ ಕಿರಣಗಳು ಮತ್ತು ಬೆಳಕು ಮೃದುವಾಗಿ ಮತ್ತು ಶಾಂತವಾಗಿರುವದನ್ನು ಮೊದಲು ನೋಡುತ್ತಾರೆ, ಆದರೆ ಬೇರೆಯವರು (ಉಳಿದವರು).

**ಕ್ರಮೇಣವಾಗಿ** ಸೂರ್ಯನನ್ನು ಮತ್ತು ಅದರ ವಿವಿಧ ಹಂತಗಳ ಪ್ರಕಾಶವನ್ನು **ನೋಡಲು ಎಚ್ಚೆತ್ತುಕೊಳ್ಳತ್ತಾರೆ** –

ಮಧ್ಯಾಹ್ನ ಸಮಯದವರೆಗೂ, ಸೂರ್ಯನ ಬೆಳಕು ಮತ್ತು ಶಕ್ತಿ ಎಲ್ಲರಿಗೂ ಸರಳವಾಗಿ **(plainly)** ಕಾಣುವದು !

ಹಾಗೆಯೇ ಕರ್ತನು ಪ್ರತ್ಯಕ್ಷತೆಯು ಇರುವದು, ಯಾರ್‍ಯಾರು "ನಿದ್ರೆ"ಯಿಂದ ಮೊದಲು ಎಚ್ಚೆತ್ತುಕೊಳ್ಳುತ್ತಾರೋ, ಅವರು ಮೊದಲು ತಿಳಿದುಕೊಳ್ಳುವರು ಎಂದು ಕೆಳಗಿನ ವಾಕ್ಯದಲ್ಲಿ ಓದುತ್ತೇವೆ –

**1 ಥೆಸಲೋನಿಕದವರಿಗೆ 5 : 4-6**

**"ನೀವು ಕತ್ತಲೆಯಲ್ಲಿರುವವರಲ್ಲ.... ನೀವೆಲ್ಲರು ಬೆಳಕಕಿನವರೂ...... ನಾವು ರಾತ್ರಿಯವರೂ ಅಲ್ಲ...... ಆದ ಕಾರಣ ನಾವು ಇತರರಂತೆ ನಿದ್ದೆಮಾಡದೆ ಎಚ್ಚರವಾಗಿರೋಣ, ಸ್ವಸ್ಥಚಿತ್ತರಾಗಿರೋಣ".**

ಹೌದು ! ಇದು ಈಗ ಲೋಕದವರನ್ನು ಕವಿದುಕೊಂಡಿರುವ ಪಾಪ ಮತ್ತು ಮರಣದ "**ಕತ್ತಲೆ**"ಯನ್ನು ಸೂಚಿಸುತ್ತದೆ ಎಂದು ಕೆಳಗಿನ ವಾಕ್ಯದಲ್ಲಿ ಓದುತ್ತೇವೆ –

**ಕೀರ್ತನೆ 30 : 5**

**"....ಸಂಜೆಗೆ ದು:ಖವೆಂಬುದು ಬಂದು ನಮ್ಮ ಬಳಿಯಲ್ಲಿ ಇಳಿದುಕೊಂಡರೂ ಮುಂಜಾನೆ ಹರ್ಷಧ್ವನಿಯು ಕೇಳಿಸುವದು".**

ಮೊದಮೊದಲು ಈ "**ರಾತ್ರಿ**" ಅಥವಾ "**ಪಾಪ ಮತ್ತು ಮರಣ**" ವೆಂಬ ಸ್ಥಿತಿಯಿಂದ ಎಚ್ಚೆತ್ತುಕೊಳ್ಳುವರು ಮತ್ತು ಅವರ "**ಮನೋನೇತ್ರ**"ಗಳು ತೆರೆಯಲ್ಪಡುವುದು. ಇವರೇ "**ಕರ್ತನ**" "**ಸಹೋದರ / ಸಹೋದರಿಯರು**".



**ಇವರು "ಚುರುಕಿನ ಹಕ್ಕಿಗಳಾಗಿದ್ದು" (early birds) ಸೂರ್ಯನ "ಉದಯ" ವಾಗುವದಕ್ಕೂ ಮೊದಲು ನೋಡುವವರಾಗಿದ್ದು ಆತನ ಎರಡನೆಯ ಪ್ರತ್ಯಕ್ಷತೆಯನ್ನು ಮೊದಲು ತಿಳಿದುಕೊಳ್ಳುವವರಾಗಿರುವರು !!**

ಮತ್ತು ಉಳಿದ ಮನುಷ್ಯ ಜಾತಿಯವರ (ಲೋಕದವರ) ವಿಷಯವೇನು? ಇದಕ್ಕೆ ಉತ್ತರವನ್ನು ಕೆಳಗಿನ ವಾಕ್ಯದಲ್ಲಿ ಓದುತ್ತೇವೆ –

**ಮತ್ತಾಯ 24 : 37-39**

**"ನೋಹನ ದಿನಗಳು ಹೇಗಿದ್ದವೋ ಹಾಗೆಯೇ ಮನುಷ್ಯಕುಮಾರನ ಬರೋಣವು ಇರುವುದು. ಹೇಗೆಂದರೆ ಜಲಪ್ರಳಯಕ್ಕೆ ಮುಂಚಿನ ದಿನಗಳಲ್ಲಿ ನೋಹನು ನಾವೆಯಲ್ಲಿ ಸೇರಿದ ದಿನದ ತನಕ ಜನರು ತಿನ್ನುತ್ತಾ, ಕುಡಿಯುತ್ತಾ, ಮದುವೆಮಾಡಿಕೊಳ್ಳುತ್ತಾ, ಮದುವೆಮಾಡಿಕೊಡುತ್ತಾ ಇದ್ದರು. ಪ್ರಳಯದ ನೀರು ಬಂದು ಎಲ್ಲರನ್ನು ಕೊಚ್ಚಿಕೊಂಡು ಹೋಗುವ ತನಕ ಅವರು ಏನೂ ತಿಳಿಯದೆ ಇದ್ದರಲ್ಲಾ. ಅದರಂತೆಯೇ ಮನುಷ್ಯಕುಮಾರನು ಬರುವ ಕಾಲದಲ್ಲಿಯೂ ಇರುವುದು."**

ಹೌದು ! ಲೋಕದವರು ತಮ್ಮ ಸಾಮಾನ್ಯವಾದ ಜೀವನ ಚಕ್ರವನ್ನು ಮುಂದುವರಿಸುತ್ತಿರುವರು, ಅವರಿಗೆ ಕರ್ತನ ಪ್ರತ್ಯಕ್ಷತೆ ಮತ್ತು ರಾಜನ ಹಿಂತಿರುಗುವಿಕೆಯ ಬಗ್ಗೆ ಸ್ವಲ್ಪವೂ ಅರಿವಿರುವುದಿಲ್ಲ !!

ಈ ಮೇಲಿನ ವಾಕ್ಯದ ಎರಡು ಪದಗಳನ್ನು ಕನ್ನಡ ಭಾಷಾಂತರದಲ್ಲಿ ಸರಿಯಾಗಿ "**ಪ್ರತ್ಯಕ್ಷತೆ**" ಎಂದು ಕೊಡಲಾಗಿದೆ.

**ಆದ್ದರಿಂದ ಕರ್ತನ "ಪರೌಸಿಯಾ" ಅಥವಾ "ಪ್ರತ್ಯಕ್ಷತೆ"ಯು ಆರಂಭದಲ್ಲಿ ಯಜಮಾನನ ನಂಬಿಗಸ್ತರಿಗೆ ಮಾತ್ರ ತಿಳಿದಿರುತ್ತದೆ !**

ಪ್ರಾಸಂಗಿಕವಾಗಿ ಕರ್ತನು ತನ್ನ ಎರಡನೆಯ ಬರುವಿಕೆಯ ರೀತಿಯನ್ನು "**ಸೂರ್ಯ**" ನಿಗೆ ಸೂಚಿಸಿದ್ದಾನೆ ಏಕೆಂದರೆ ಸ್ವತಃ ಆತನನ್ನು –

"ಧರ್ಮವೆಂಬ (ನೀತಿಯ) ಸೂರ್ಯನು ........." – **ಮಲಾಕಿಯ** 4 : 2

"(ತನ್ನ ರೆಕ್ಕೆಗಳಲ್ಲಿ) ಸ್ವಸ್ಥತಗೆಯನ್ನುಂಟು ಮಾಡುವವನಾಗಿ" ಉದಯಿಸುವನು ಎಂದು ಓದುತ್ತೇವೆ.

ಇದಲ್ಲದೆ ಸೂರ್ಯನು ಈ ಲೋಕಕ್ಕೆ ಬೆಳಕನ್ನು ಮತ್ತು ಜೀವವನ್ನು ತರುತ್ತಾನೆ. ಅದೇ ರೀತಿ ಸ್ವತ: ಕರ್ತನ ಎರಡನೆಯ ಬರುವಿಕೆಯಲ್ಲಿ ಇರುವದು !!

ಎರಡನೆಯ ಬರುವಿಕೆಗೆ ಸಂಬಂಧಿಸಿದಂತೆ **"ಪರೌಸಿಯಾ"** ಎಂಬ ಪದಕ್ಕೆ (ಆಂಗ್ಲ ಭಾಷೆಯಲ್ಲಿ) **"ಬರುವಿಕೆ"** ಎಂದು ಭಾಷಾಂತರಿಸಿರುವ 17 ವಾಕ್ಯಗಳು ಯಾವುದೆಂದರೆ –

**ಮತ್ತಾಯ** 24:27 - "...ಮನುಷ್ಯಕುಮಾರನ ಬರೋಣವೂ ("ಪ್ರತ್ಯಕ್ಷತೆಯು") ಇರುವದು...."

**ಮತ್ತಾಯ** 24 : 37 - "ಹಾಗೆಯೇ ಮನುಷ್ಯಕುಮಾರನ ಪ್ರತ್ಯಕ್ಷತೆಯು ಇರುವುದು"

**ಮತ್ತಾಯ** 24 : 39 - "ಅದರಂತಗೆ ಮನುಷ್ಯ ಕುಮಾರನ ಪ್ರತ್ಯಕ್ಷವಾಗುವ ಕಾಲದಲ್ಲಿಯೂ ಇರುವುದು"

1 **ಕೊರಿಂಥ** 15 : 23 - "ಕ್ರಿಸ್ತನ ಪ್ರತ್ಯಕ್ಷತೆಯಲ್ಲಿ ಆತನವರು ಎದ್ದು ಬರುವರು".

1 **ಥೆಸಲೋನಿಕ** 2 : 19 — "ನಮ್ಮ ಕರ್ತನಾದ ಯೇಸು ಪ್ರತ್ಯಕ್ಷವಾಗುವಾಗ......"

1 **ಥೆಸಲೋನಿಕ** 3 : 13 - "ಎಲ್ಲಾ ಪರಿಶುದ್ಧ ಪರಿವಾರ ಸಮೇತ ಪ್ರತ್ಯಕ್ಷನಾದಾಗ"

1 **ಥೆಸಲೋನಿಕ** 4 : 15 — "ಕರ್ತನು ಪ್ರತ್ಯಕ್ಷನಾಗುವವರೆಗೂ"

1 **ಥೆಸಲೋನಿಕ** 5 : 23 — "ಯೇಸುಕ್ರಿಸ್ತನು ಪ್ರತ್ಯಕ್ಷನಾದಾಗ"

2 **ಥೆಸಲೋನಿಕ** 2 : 1 - "ಯೇಸುಕ್ರಿಸ್ತನು ಪ್ರತ್ಯಕ್ಷತೆಯ ವಿಷಯವಾಗಿಯೂ"

2 **ಥೆಸಲೋನಿಕ** 2 : 8 - "ತನ್ನ ಪ್ರತ್ಯಕ್ಷತೆಯ ಪ್ರಕಾಶದಿಂದ ಸಂಹರಿಸುವನು".

2 **ಥೆಸಲೋನಿಕ** 2 : 9 - "ಪ್ರತ್ಯಕ್ಷತೆಯು......"

**ಯಾಕೋಬನು** 5 : 8 — "ಕರ್ತನು ಪ್ರತ್ಯಕ್ಷತೆಯು ಹತ್ತಿರವಾಯಿತು"

**ಯಾಕೋಬನು** 5 : 7 — **"ಕರ್ತನು ಪ್ರತ್ಯಕ್ಷನಾಗುವ ತನಕ ....."**

2 **ಪೇತ್ರನು** 3 : 4 — **"ಆತನ ಪ್ರತ್ಯಕ್ಷತೆಯ ವಿಷಯವಾದ ವಾಗ್ದಾನವು......"**

2 **ಪೇತ್ರನು** 3 : 12 – **"ಪ್ರತ್ಯಕ್ಷತೆಯನ್ನು ಎದುರುನೋಡುತ್ತಾ...."**

1 **ಯೋಹಾನನು** 2:28 — **"ಆತನು ಪ್ರತ್ಯಕ್ಷನಾಗುವಾಗ .........."**

ಈಗ ನಾವು ನಮ್ಮ ಕರ್ತನ ಎರಡನೆಯ ಬರುವಿಕೆ ವಿಷಯದಲ್ಲಿ ಉಪಯೋಗಿಸಿರುವ ಎರಡನೆಯ ಗ್ರೀಕ್ ಪದವನ್ನು ಕುರಿತು ಅಭ್ಯಾಸಿಸೋಣ –

# 2 . ಎಪಿಫೇನಿಯಾ

ಈ ಗ್ರೀಕ್ ಪದದ ಅರ್ಥವೇನೆಂದರೆ "**ಪ್ರಕಾಶಗೊಳಿಸುವದು**" ಅಥವಾ "**ಪ್ರಕಾಶವಾಗಿ ಹೊಳೆಯುವದು**" ಅಥವಾ "**ಪ್ರಕಾಶವಾಗಿ ವ್ಯಕ್ತವಾಗುವುದು**"

(ಸ್ಟ್ರಾಂಗ್ಸ್ – ಗ್ರೀಕ್ # 2015)

ಕರ್ತನ ಬರುವಿಕೆಯ ಈ ಹಂತವು (ಪರೌಸಿಯಾ) ಪ್ರತ್ಯಕ್ಷತೆಯಿಂದ ಅಂದರೆ ರಹಸ್ಯವಾಗಿ **"ಕಳ್ಳನು ಬರುವ"** ಹಾಗಿಂದ ಕ್ರಮೇಣವಾಗಿ – "ವಿಶ್ವಾಸದ ಕಣ್ಣುಗಳಿರುವವರಿಗೆ" ಗ್ರಹಿಸಲು .......... ಅಥವಾ ಗುರುತಿಸಲು ಆಗುತ್ತದೆ. ಏಕೆಂದರೆ ಸತ್ಯವಾಕ್ಯದ ಬೆಳಕಿನಿಂದ ಪ್ರಕಾಶವಾಗಿ ಮತ್ತು ಸ್ಪಷ್ಟವಾಗಿ ಕಾಣಲಾರಂಭಿಸುತ್ತದೆ !!

**......ಆದ್ದರಿಂದ ವಾಕ್ಯದ ಮೇಲಿನ ನಂಬಿಕೆಯಿಂದ ಮಾತ್ರ ಕರ್ತನ ಎರಡನೆಯ ಬರುವಿಕೆಯ ತಿಳುವಳಿಕೆ ಮತ್ತು ಗೋಚರವಾಗುತ್ತದೆ.**

ಇದನ್ನು ಕುರಿತೇ ನಾವು ಕೆಳಗಿನ ವಾಕ್ಯದಲ್ಲಿ ಸ್ಪಷ್ಟವಾಗಿ ಓದುತ್ತೇವೆ –

**2 ಕೊರಿಂಥದವರಿಗೆ 5 : 7**

**"ನಾವು ನೋಡುವವರಾಗಿ ನಡೆಯದೆ ನಂಬುವವರಾಗಿಯೇ ನಡೆಯುತ್ತೇವೆ....."**

ಹೌದು ! ಇದು ಯಜಮಾನನ ಎಲ್ಲಾ ಹಿಂಬಾಲಕರಾದ – ಆತನ **"ಸಹೋದರ / ಸಹೋದರಿಯರಿಗೆ"** –

ಹೊಸ ಸೃಷ್ಟಿಯಾಗಿ ಯಾರೆಲ್ಲಾ **"ನಂಬುವವರಾಗಿ ನಡೆಯುತ್ತಾರೋ"** (..... ದೇವರ ವಾಕ್ಯದ ಮೇಲೆ) ಮತ್ತು ಲೋಕದವರಂತೆ **"ನೋಡಿ"** ನಂಬುವವರಾಗದೆ ಇರುವಂಥವರಿಗೆ ನಿಜವಾಗಿದೆ.

**ಆದ್ದರಿಂದ ದೇವರ ವಾಕ್ಯಗಳಿಗೆ "ತಿಳುವಳಿಕೆಯ ಕಣ್ಣು" ಗಳು ಯಾರ್ಯಾರಿಗೆ ತೆರದಿರುತ್ತದೋ ಅಂಥವರಿಗೆ ಕರ್ತನ ರಹಸ್ಯವಾದ ಪ್ರತ್ಯಕ್ಷತೆಯು ಸತ್ಯವೇದದಿಂದ ಬೆಳಕು "ಪ್ರಕಾಶವಾಗಿ ಹೊಳೆಯುವ"ದನ್ನು ಸ್ಪಷ್ಟವಾಗಿ "ಕಾಣುವರು" !**

ಹೌದು ! ಈಗ ನಾವು ವಾಕ್ಯವನ್ನು ಮತ್ತು ಇಗೋ ಅದರ ..... ಬೆಳಕನ್ನು ಕುರಿತು ಕೆಳಗಿನ ವಾಕ್ಯದಲ್ಲಿ ನೋಡೋಣ –

**ಮತ್ತಾಯ 25 : 6**

**"ಅರ್ಧ ರಾತ್ರಿಯಲ್ಲಿ - ಇಗೋ, ಮದಲಿಂಗನು ! ಅವನನ್ನು ಎದುರುಗೊಳ್ಳುವದಕ್ಕೆ ಹೊರಡಿರಿ ಎಂಬ ಕೂಗಾಯಿತು".**

ಮೊದಲನೆಯದಾಗಿ (ಕೆ.ಜೆ.ವಿ. ಆಂಗ್ಲಭಾಷೆಯಲ್ಲಿ **"ಬರುವನು"** **(cometh)** ಎಂಬ ಪದವನ್ನು ಅಳಿಸಬೇಕು. ಏಕೆಂದರೆ ಆದಿ ಕೈಬರಹಗಳಲ್ಲಿ (early manuscripts) ಇದು ಕಂಡುಬರುವುದಿಲ್ಲ.

ಈಗ ನಾವು ಇದೇ ವಾಕ್ಯವನ್ನು ಎನ್.ಐ.ವಿ. ಭಾಷಾಂತರದಲ್ಲಿ ನೋಡೋಣ –

**".......... ಮದಲಿಂಗನು ಇಲ್ಲಿರುವನು !.........."**

ಹೌದು ! ಇಗೋ ! ಇದು ಬಹಳ ಸ್ಪಷ್ಟವಾಗಿದೆಯಲ್ಲವೆ !

ಈ ವಾಕ್ಯವು – ..... **"ಮದಲಿಂಗನು"** ಬರುವುದನ್ನು ಕುರಿತು ನೇರವಾಗಿ ಮಾತನಾಡುತ್ತದೆ. ಹೌದು ........... ! ಕರ್ತನಾದ ಯೇಸುವಿನ ಎರಡನೆಯ ಬರುವಿಕೆ !!

ಮತ್ತು ಆತನ ಬರುವಿಕೆಯನ್ನು ಕುರಿತು ಮಾತ್ರವಲ್ಲ ಆದರೆ ಆತನು ಬಂದಿರುವನು ಮತ್ತು ಹಾಜರಿರುವನು !!

ಇದು ಸಾಮ್ಯರೂಪ ಭಾಷೆಯಾಗಿದ್ದು – "ಹತ್ತು ಕನ್ಯೆ"ಯರ ಸಾಮ್ಯ ರೂಪದ ಒಂದು ಭಾಗವಾಗಿದೆ.

ಇದು ಆತನು ಬಂದಿರುವದನ್ನು ಮತ್ತು ಆತನ ಎರಡನೆಯ ಬರುವಿಕೆಯ ಗುರುತಿಸುವಿಕೆಯನ್ನು ಕುರಿತು ಮಾತನಾಡುತ್ತದೆ.

ಇಲ್ಲಿ **"ಅರ್ಧ ರಾತ್ರಿ"** ಎಂದರೆ ಕರ್ತನು ಹಿಂತಿರುಗುವ ಕಾಲವನ್ನು ಸೂಚಿಸುತ್ತದೆ ಮತ್ತು ಈ ವಿಷಯವನ್ನು ಕುರಿತು ಮುಂದಿನ ಅಭ್ಯಾಸದಲ್ಲಿ ನೋಡಲಿದ್ದೇವೆ.

ಆದರೆ ಈಗ ನಾವು ಈ ವಾಕ್ಯದಲ್ಲಿ ಅಡಗಿರುವ ಸತ್ಯವನ್ನು ಕುರಿತು ಅಭ್ಯಾಸ ಮಾಡೋಣ –

**"ಇಗೋ, ಮದಲಿಂಗನು ! ......ಎಂಬ ಕೂಗಾಯಿತು"**

ಇದು ಮದಲಿಂಗನ "**ಪ್ರತ್ಯಕ್ಷತೆ**"ಯನ್ನು ತಿಳಿಸುವ ಘೋಷಣೆಯನ್ನು ಸೂಚಿಸುತ್ತದೆ !

ಇದು **"ದೃಢವಾದ ಪ್ರವಾದನ ವಾಕ್ಯದ"** ಮೂಲಕ ದೈವೀಕ ಘೋಷಣೆ ಮಾಡುವುದನ್ನೂ ಸೂಚಿಸುತ್ತದೆ (2 ಪೇತ್ರನು 1 : 19)

ಹೌದು ! "ತಕ್ಕ ಕಾಲದಲ್ಲಿ" ಈ ಪ್ರವಾದನ ವಾಕ್ಯವು ಅರ್ಥವಾಗಲು ಆರಂಭವಾಗುವವು ಮತ್ತು ಈ ಪ್ರವಾದನಾ ಪ್ರಕಟನೆಯು ಹಿಂದಿರುಗಿದ ಕರ್ತನ ಬಗ್ಗೆ ಸತ್ಯದ ಬೆಳಕನ್ನು ತರುವುದು!

**ಹೌದು ! ಇದರಲ್ಲಿ ಕರ್ತನ ಎರಡನೆ ಬರುವಿಕೆಯ ರೀತಿ ಮತ್ತು ಸ್ವಭಾವವನ್ನು ಕುರಿತು ದೇವರ ವಾಕ್ಯದಿಂದ ವಿವರವಾದ ಮತ್ತು ಸ್ಪಷ್ಟವಾದ ಪ್ರಕಟನೆಯು ಇರುತ್ತದೆ !**

ಇದೇ **"ಕೂಗಾಯಿತು"** ಎಂಬುದಕ್ಕೆ ಅರ್ಥವಾಗಿದೆ.

ನಂತರ ನಾವು ಇನ್ನು ಮುಂದೆ ಓದೋಣ –

## "ಅವನನ್ನು ಎದುರುಗೊಳ್ಳುವುದಕ್ಕೆ ಹೊರಡಿರಿ"

ಈ ವಾಕ್ಯದಲ್ಲಿ ಮೊದಲ ವಿಷಯ ಗಮನಿಸಬೇಕಾದದ್ದು ಏನೆಂದರೆ –

"**ಹೊರಡಿರಿ**" [ಆಂಗ್ಲದಲ್ಲಿ "**ye**" (ನೀನು)]

ಅಂದರೆ ಪ್ರತ್ಯೇಕವಾದ ಕ್ರೈಸ್ತರನ್ನು ಸೂಚಿಸುತ್ತದೆ !!

ಹೌದು ! ಈ ಕರೆಯು ಪ್ರತಿಯೊಬ್ಬರಿಗೂ ಪ್ರತ್ಯಕ್ಷವಾಗಿ ನಂಬಿಕೆಯಿಂದ ಪ್ರತಿಕ್ರಿಯಿಸಬೇಕು. ಆದ್ದರಿಂದ –

"ಅವನನ್ನು ಎದುರುಗೊಳ್ಳುವದಕ್ಕೆ ಹೊರಡಿರಿ"

**ಇದು ಹೇಗೆ ಸಾಧ್ಯವಾಗುತ್ತದೆ ?**

ಇದಕ್ಕೆ ಉತ್ತರವನ್ನು ಕೆಳಗಿನ ವಾಕ್ಯದಲ್ಲಿ ಓದುತ್ತೇವೆ –

ಪ್ರಕಟನೆ 3 : 20

"ಇಗೋ ಬಾಗಿಲಲ್ಲಿ ನಿಂತುಕೊಂಡು ತಟ್ಟುತ್ತಾ ಇದ್ದೇನೆ. ಯಾವನಾದರೂ ನನ್ನ ಧ್ವನಿಯನ್ನು ಕೇಳಿ ಬಾಗಿಲನ್ನು ತೆರೆದರೆ ನಾನು ಒಳಗೆ ಬಂದು ಅವನ ಸಂಗಡ ಊಟ ಮಾಡುವೆನು. ಅವನು ನನ್ನ ಸಂಗಡ ಊಟ ಮಾಡುವನು."

ಇಗೋ ! ಪ್ರತಿಯೊಬ್ಬ ಕ್ರೈಸ್ತನಿಗೆ ಪ್ರತ್ಯೇಕವಾಗಿ ಹೇಗೆ ಈ ಅನುಭವವಾಗುತ್ತದೆ ಎಂದು ಇಲ್ಲಿ ಸ್ಪಷ್ಟವಾಗಿ ವಿವರಿಸಲಾಗಿದೆ !!

ಇಲ್ಲಿ ಕೆಳಗಿನ ವಾಕ್ಯವನ್ನು ಗಮನಿಸಿರಿ –

"ಯಾವನಾದರೂ ನನ್ನ ಶಬ್ಧವನ್ನು ಕೇಳಿ......"

ಈಗ ಕರ್ತನನ್ನು "ಭೇಟಿ"ಯಾಗುವದನ್ನು ಇಲ್ಲಿ ತೋರಿಸಲಾಗಿದೆ –

"......... ಬಾಗಿಲನ್ನು ತೆರೆದರೆ......."

**ಇಲ್ಲಿ "ಬಾಗಿಲು" ಏನನ್ನು ಸೂಚಿಸುತ್ತದೆ?**

ಕರ್ತನು ಈ "ಬಾಗಿಲನ್ನು ತಟ್ಟು"ತ್ತಾನೆ !


ಒಬ್ಬ ವ್ಯಕ್ತಿ ಸ್ಪಷ್ಟವಾಗಿ ತಿಳಿದುಕೊಳ್ಳಬಹುದೆಂದರೆ ಇದು ನೇರವಾದ ಬಾಗಿಲು ಅಥವಾ ಬಾಗಿಲನ್ನು ತಟ್ಟುವದನ್ನು ಸೂಚಿಸುವುದಿಲ್ಲ !

ಈ "**ತಟ್ಟುವದು**" ಮತ್ತು ಮತ್ತಾಯ 25 : 6 ರಲ್ಲಿ ಸೂಚಿಸಿರುವ

"ಕೂಗುವರು" ಎರಡೂ ಸಹ ಒಂದೇ ಅರ್ಥಕೊಡುತ್ತದೆ.

**ಹೌದು ! ಇದು ದೇವರ ವಾಕ್ಯದ ಮೂಲಕ ಕರ್ತನ ಎರಡನೆಯ ಪ್ರತ್ಯಕ್ಷತೆಯ ಕುರಿತ ಪ್ರವಾದನ ಪ್ರಕಟನೆಯಾಗಿದೆ !**

ಆದ್ದರಿಂದ ಈ **"ಬಾಗಿಲು"** ಎಂದರೆ **"ಒಬ್ಬ ವ್ಯಕ್ತಿಯ ತಿಳುವಳಿಕೆಯ ಬಾಗಿಲನ್ನು"** ಸೂಚಿಸುತ್ತದೆ. ಇದರ ಮೂಲಕ ಆತನು ಈ ಮಹಾ ಸತ್ಯದ ಪ್ರವಾದನ ಘೋಷಣೆಯನ್ನು "ಕೇಳಿಸಿ ಕೊಳ್ಳುವನು" !!




**ಹಾಗಿರುವಾಗ ಪ್ರತಿಯೊಬ್ಬನು ತನ್ನ ಸ್ವಂತ ವೈಯಕ್ತಿಕ ನಿರ್ಧಾರವನ್ನು ಕುರಿತು ಪ್ರತಿಕ್ರಿಯೆ ಯನ್ನುಂಟು ಮಾಡಬೇಕಾಗುತ್ತದೆ**

ಯಾರ್ಯಾರು "ಬಾಗಿಲನ್ನು ತೆರೆದು" ಅಥವಾ

ಈ ಸತ್ಯವನ್ನು ಸ್ವೀಕರಿಸಿ ಇನ್ನೂ ಹೆಚ್ಚಾಗಿ ಹುಡುಕುವವರಿಗೆ

– ಕರ್ತನ ವಾಗ್ದಾನ ವೇನೆಂದರೆ –

"ನಾನು ಒಳಗೆ ಬಂದು ಅವನ ಸಂಗಡ ಊಟಮಾಡುವೆನು. ಅವನು ನನ್ನ ಸಂಗಡ ಊಟ ಮಾಡುವನು".

ಇಲ್ಲಿ **"ಊಟ"** ಎಂದರೆ ಆತ್ಮೀಕ ಆಹಾರ ಮತ್ತು ದೇವರ ಯೋಜನೆಯ ಆಳವಾದ ವಿಷಯಗಳ ಹಬ್ಬ ಮತ್ತು ಆತನಿಂದ ಬಯಲಾದ ಉದ್ದೇಶಗಳನ್ನು ಸೂಚಿಸುತ್ತದೆ.

ಮತ್ತು ಯಾರ್ಯಾರು "**ಅವನ ಸಂಗಡ ಊಟ ಮಾಡುವೆನು. ಅವನು ನನ್ನ ಸಂಗಡ ಊಟ ಮಾಡುವನು.**" ಎಂಬ ವಾಕ್ಯವನ್ನು ಅಧಿಕವಾಗಿ ತಿಳಿದುಕೊಳ್ಳಲು ಹುಡುಕುತ್ತಾರೋ ಅಂಥಹ ಪ್ರತಿಯೊಬ್ಬ ಕ್ರೈಸ್ತನೊಂದಿಗೂ  ಕರ್ತನು ವೈಯಕ್ತಿಕ ಸಂವಾದವನ್ನು (personal interaction) ಹೊಂದಿರುವುದನ್ನು ಗಮನಿಸಿರಿ.

## ಈ ಕರ್ತನ ವಾಗ್ದಾನವು ವೈಯಕ್ತಿಕ ಹಾಗೂ ಪ್ರತ್ಯೇಕವಾದ ವಿಷಯವಾಗಿದೆ

ಆದ್ದರಿಂದ ಆತನು ಹೀಗೆ ಹೇಳುವುದನ್ನು ನಾವು ಓದುತ್ತೇವೆ......

**"......ಯಾವನಾದರೂ ನನ್ನ ಶಬ್ಧವನ್ನು ಕೇಳಿ ಬಾಗಿಲನ್ನು ತೆರೆದರೆ...."**

ಆದ್ದರಿಂದ ನಿಜವಾದ "**ಎಚ್ಚರಿಕೆ**" ಯುಳ್ಳವರು ಅಧಿಕ ಅಧಿಕವಾದ ಸತ್ಯವೇದದ ಆಧಾರಗಳ ಮೂಲಕ ಕಣ್ಣಿಗೆ ಕಾಣದಿರುವ ರಾಜನ ಮತ್ತು ಕರ್ತನ "**ಪ್ರತ್ಯಕ್ಷತೆ**" ಯನ್ನು ಗ್ರಹಿಸಿ "**ಹೆಚ್ಚಾಗಿರುವ**" ಬೆಳಕು ಅಥವಾ ಕರ್ತನ ಪ್ರತ್ಯಕ್ಷತೆಯ ಎಪಿಫೇನಿಯಾವನ್ನು ನೋಡಿ ಅಧಿಕ ಸಂತೋಷಪಡುವರು !!

ಈಗ ಕರ್ತನ ಮೊದಲ ಮತ್ತು ಎರಡನೆಯ ಬರುವಿಕೆಗಳಲ್ಲಿ ಕೆಲವು ಹೋಲಿಕೆಯಿ ರುವದನ್ನು ಗಮನಿಸುತ್ತೇವೆ –

ಆಗ ಸಹ ಆತನು ಮಾಂಸ ಮತ್ತು ಶರೀರದಲ್ಲಿ (ಪ್ರತ್ಯಕ್ಷವಾಗಿ) ಇದ್ದನು.  ಆದರೂ ಕೆಲವರು ಮಾತ್ರ ಆತನನ್ನು "**ತಿಳಿದಿದ್ದರು**" ಅಥವಾ ಆತನ ಪ್ರತ್ಯಕ್ಷತೆ ಮತ್ತು ಆತನನ್ನು ಗುರುತಿಸಿದರು !!

ಸ್ನಾನಿಕನಾದ ಯೋಹಾನನು ವಾಕ್ಯಗಳಲ್ಲಿ ನಾವು ಹೀಗೆ ಗಮನಿಸುತ್ತೇವೆ –

**ಯೋಹಾನ 1 : 26**

**"...........ಆದರೆ ನೀವು ಅರಿಯದೆ ಇರುವ ಒಬ್ಬಾತನು ನಿಮ್ಮ ಮಧ್ಯದಲ್ಲಿ ನಿಂತಿದ್ದಾನೆ."**

ಇಲ್ಲಿ "**ಅರಿಯುವದು**" ಎಂಬುದಕ್ಕೆ ಅರ್ಥವೇನೆಂದರೆ –

"**ಗುರುತಿಸುವದು**" ಅಥವಾ "**ಗ್ರಹಿಸುವದು**"

ಆಗ ಇದ್ದಂತೆ ಈಗಲೂ ಸಹ ಕರ್ತನ ಎಪಿಫೇನಿಯಾದಲ್ಲಿ ಯಾರ್ಯಾರು "**ಬೆಳಕಿನಲ್ಲಿ ನಡೆಯುತ್ತಾರೋ**" ಅವರಿಗೆ ಮಾತ್ರ ಆತನು ಕಾಣಿಸಿಕೊಳ್ಳುತ್ತಾನೆ

(I **ಥೆಸಲೋನಿಕದವರಿಗೆ** 5 : 5)

ಇದು ಸತ್ಯವಾಕ್ಯದ ಜ್ಞಾನವನ್ನು ಸೂಚಿಸುತ್ತದೆ !!

ಈ ಬೆಳಕು ಮತ್ತು ಕಣ್ಣಿಗೆ ಕಾಣುವದು **"ಸತ್ಯವಾಕ್ಯ"** ಮೂಲಕವಾಗಿದೆ ಎಂದು ಕೆಳಗಿನ ಸಾಮ್ಯರೂಪದಲ್ಲಿ ವಿವರಿಸಲಾಗಿದೆ –

## ಮತ್ತಾಯ 25 : 1-9

"ಪರಲೋಕ ರಾಜ್ಯವು ತಮ್ಮ ದೀಪಾರತಿಗಳನ್ನು ತೆಗೆದುಕೊಂಡು ಮದಲಿಂಗನನ್ನು ಸಂಧಿಸುವುದಕ್ಕೆ ಹೊರಟಂತಹ ಹತ್ತು ಮಂದಿ ಕನ್ನಿಕೆಯರಿಗೆ ಹೋಲಿಕೆಯಾಗಿದೆ. ಅವರಲ್ಲಿ ಐದು ಮಂದಿ ಬುದ್ಧಿವಂತೆಯರು, ಐದು ಮಂದಿ ಬುದ್ಧಿಹೀನರು. ಅವಿವೇಕಿಗಳು ತಮ್ಮ ದೀಪಾರತಿಗಳನ್ನು ತೆಗೆದುಕೊಂಡರು, ಆದರೆ ತಮ್ಮೊಂದಿಗೆ ಎಣ್ಣೆಯನ್ನು ತೆಗೆದುಕೊಳ್ಳಲಿಲ್ಲ. ಆದರೆ ಬುದ್ಧಿವಂತರಾದ ಕನ್ನಿಕೆಯರು ತಮ್ಮ ದೀಪಾರತಿಗಳೊಂದಿಗೆ ಪಾತ್ರೆಗಳಲ್ಲಿ ಎಣ್ಣೆಯನ್ನೂ ತೆಗೆದುಕೊಂಡರು. ಮದಲಿಂಗನು ಬರುವುದಕ್ಕೆ ತಡಮಾಡಲು ಅವರೆಲ್ಲರೂ ತೂಕಡಿಸಿ ನಿದ್ರಿಸಿದರು. ಆದರೆ ಅರ್ಧರಾತ್ರಿಯಲ್ಲಿ, 'ಇಗೋ, ಮದಲಿಂಗನು ಬರುತ್ತಿದ್ದಾನೆ ಅವನನ್ನು ಎದುರುಗೊಳ್ಳಲು ಹೊರಡಿರಿ' ಎಂಬ ಕೂಗು ಕೇಳಿಸಿತು. ಆಗ ಆ ಕನ್ನಿಕೆಯರೆಲ್ಲರು ಎಚ್ಚೆತ್ತು ತಮ್ಮ ದೀಪಾರತಿಗಳನ್ನು ಸರಿಮಾಡಿಕೊಂಡರು. ಆಗ ಬುದ್ಧಿಹೀನರಾದ ಕನ್ನಿಕೆಯರು ಬುದ್ಧಿವಂತರಾಗಿದ್ದ ಕನ್ನಿಕೆಯರಿಗೆ, 'ನಿಮ್ಮ ಎಣ್ಣೆಯಲ್ಲಿ ನಮಗೆ ಸ್ವಲ್ಪ ಕೊಡಿರಿ. ಏಕೆಂದರೆ ನಮ್ಮ ದೀಪಗಳು ಆರಿಹೋಗುತ್ತವೆ' ಎಂದು ಕೇಳಿದರು. ಅದಕ್ಕೆ ಆ ಬುದ್ಧಿವಂತರಾದ ಕನ್ನಿಕೆಯರು, ಆಗುವುದಿಲ್ಲ 'ನಿಮಗೆ ಕೊಟ್ಟರೆ ನಮಗೂ ನಿಮಗೂ ಸಾಲದೆ ಹೋದೀತು; ನೀವು ಮಾರುವವರ ಬಳಿಗೆ ಹೋಗಿ ಕೊಂಡುಕೊಂಡರೆ ಒಳ್ಳೆಯದು' ಅಂದರು."

ಹೌದು ! ಇದು **"ಹತ್ತು ಕನ್ಯೆಯರ"** ಸಾಮ್ಯರೂಪವಾಗಿದೆ.

ನಾವು 2ನೇ ವಾಕ್ಯದಲ್ಲಿ ಹೀಗೆ ಓಡುತ್ತೇವೆ –

"ಅವರಲ್ಲಿ ಐದು ಮಂದಿ ಬುದ್ಧಿಯಿಲ್ಲದವರು, ಐದು ಮಂದಿ ಬುದ್ಧಿವಂತೆಯರು".

ಆದರೆ ಎಲ್ಲರ ಬಳಿ "ಆರತಿ" (ದೀಪ) ಇತ್ತೆಂದು ಓದುತ್ತೇವೆ – ವಾಕ್ಯ– 1

"...............ಆರತಿಗಳನ್ನು ತೆಗೆದುಕೊಂಡು ಮದಲಿಂಗನನ್ನು ಎದುರುಗೊಳ್ಳುವದಕ್ಕೆ ಹೊರಟಂಥ ಹತ್ತು ಮಂದಿ ಕನ್ಯೆಯರಿಗೆ......."

**ಈ "ಆರತಿಗಳು" (ದೀಪ) ಎಂದರೇನು**

ಅದು ದೇವರ ವಾಕ್ಯದ ಚಿತ್ರಣವಾಗಿದೆ –



ಎಂದು ಕೆಳಗಿನ ವಾಕ್ಯದಲ್ಲಿ ಓದುತ್ತೇವೆ –

**ಕೀರ್ತನೆ 119 : 105** - "ನಿನ್ನ ವಾಕ್ಯವು ನನ್ನ ಕಾಲಿಗೆ ದೀಪವೂ ನನ್ನ ದಾರಿಗೆ ಬೆಳಕೂ ಆಗಿದೆ".

ನಂತರ ನಾವು ಏನು ನೋಡುತ್ತೇವೆ? ಮುಂದೆ ಓದೋಣ -

**ವಾಕ್ಯ – 3** - "ಬುದ್ಧಿಯಿಲ್ಲದವರು ತಮ್ಮ ಆರತಿಗಳನ್ನು ತಕ್ಕೊಂಡರು. ಆದರೆ ಎಣ್ಣೆ ತಕ್ಕೊಳಲಿಲ್ಲ".

**ವಾಕ್ಯ – 4** – "ಬುದ್ಧಿವಂತೆಯರು ತಮ್ಮ ಆರತಿಗಳ ಕೂಡ ಪಾತ್ರೆಗಳಲ್ಲಿ ಎಣ್ಣೆ ತಕ್ಕೊಂಡರು".

## ಇವು ಸಾಮ್ಯರೂಪ ಭಾಷೆಯ ವಾಕ್ಯದ ಚಿತ್ರಣವಾಗಿದೆ !

ಅವು ಏನನ್ನು ಸೂಚಿಸುತ್ತದೆಂದು ನಾವು ನೋಡೋಣ –

## "ಎಣ್ಣೆ" ಎಂದರೇನು?

ಇದು ಪವಿತ್ರಾತ್ಮವನ್ನು ಸೂಚಿಸುತ್ತದೆಂದು ಕೆಳಗಿನ ವಾಕ್ಯದಲ್ಲಿ ಓದುತ್ತೇವೆ –

**ಕೀರ್ತನೆ 133 : 2, 3**

"ಅದು ಆರೋನನ ತಲೆಯ ಮೇಲೆ ಹಾಕಲ್ಪಟ್ಟು, ಅವನ ಗಡ್ಡದ ಮೇಲೆಯೂ, ಅವನ ಅಂಗಿಗಳ ಕೊರಳ ಪಟ್ಟಿಯವರೆಗೂ ಹರಿದು ಬರುವ ಶ್ರೇಷ್ಠ ತೈಲದಂತೆಯೂ, ಹೆರ್ಮೋನ್ ಪರ್ವತದಲ್ಲಿ ಹುಟ್ಟಿ, ಚೀಯೋನ್ ಪರ್ವತದ ಮೇಲೆ ಬೀಳುವ ಮಂಜಿನಂತೆಯೂ ಇದೆ. ಅಲ್ಲಿ ಆಶೀರ್ವಾದವೂ, ಜೀವವೂ ಸದಾಕಾಲ ಇರಬೇಕೆಂದು, ಯೆಹೋವನು ಆಜ್ಞಾಪಿಸಿದ್ದಾನೆ."

ಪವಿತ್ರಾತ್ಮ ಮೂಲಕ ಮಾತ್ರವೇ ಕರ್ತನ ವಾಕ್ಯಗಳನ್ನು ಗ್ರಹಿಸಲು ಮತ್ತು ತಿಳಿದುಕೊಳ್ಳಲು ಸಾಧ್ಯವಾಗುತ್ತದೆ ಎಂದು ಸ್ಪಷ್ಟವಾಗಿ ಓದುತ್ತೇವೆ -

**1 ಕೊರಿಂಥದವರಿಗೆ 2 : 14** — ".....ಅವು ಆತ್ಮವಿಚಾರದಿಂದ ತಿಳಿಯತಕ್ಕವುಗಳಾಗಿರಲಾಗಿ ಅವನು ಅವುಗಳನ್ನು ಗ್ರಹಿಸಲಾರನು".

ಹೇಗೆ ನಿಜವಾದ ದೀಪದಲ್ಲಿ ಎಣ್ಣೆಯನ್ನು ಸುರಿದಾಗ ಮಾತ್ರ ತನ್ನ ಬೆಳಕು ಕೊಡುತ್ತದೆ !!

............ಹಾಗೆಯೇ ದೇವರ ವಾಕ್ಯವೆಂಬ "**ದೀಪ**"ದ ವಿಷಯದಲ್ಲಿರುವದು !

ಪವಿತ್ರಾತ್ಮವೆಂಬ "**ಎಣ್ಣೆ**" ಯಿಂದ ಮಾತ್ರ "**ದೀಪದ ಬೆಳಕು**" ಅಥವಾ ಸತ್ಯವು ಬೆಳಕನ್ನು (ಪ್ರಕಾಶವನ್ನು) ಕೊಡುತ್ತದೆ !!

ಆದರೆ ನಾವು ಓದುವದೇನೆಂದರೆ ಕನ್ಯೆಯರಲ್ಲಿ "**ಬುದ್ಧಿವಂತೆ**"ಯರು ಮಾತ್ರ ತಮ್ಮ ಜೊತೆ –

**"ತಮ್ಮ ಆರತಿಗಳ (ದೀಪ) ಕೂಡ ಪಾತ್ರೆಗಳಲ್ಲಿ ಎಣ್ಣೆ ತಕ್ಕೊಂಡರು"**

ಕನ್ಯೆಯರಲ್ಲಿ "**ಬುದ್ಧಿಯಿಲ್ಲದವರು**" ಹೀಗೆ ಮಾಡಲಿಲ್ಲ ಎಂದು ನಾವು ಓದುತ್ತೇವೆ !!

## "ಪಾತ್ರೆಗಳು" ಎಂದರೇನು?

ಇದಕ್ಕೆ ಉತ್ತರವನ್ನು ಕೆಳಗಿನ ವಾಕ್ಯದಲ್ಲಿ ಓದುತ್ತೇವೆ –

**2 ಕೊರಿಂಥದವರಿಗೆ 4 : 7**

**"ಬಲಾಧಿಕ್ಯವು ನಮ್ಮದಲ್ಲ, ಅದು ದೇವರದಾಗಿರುವ ಹಾಗೆ ಈ ನಿಕ್ಷೇಪವು ಮಣ್ಣಿನ ಘಟಗಳಲ್ಲಿ ನಮಗುಂಟು."**

ಇಲ್ಲಿ "**ಮಣ್ಣಿನ ಘಟಗಳು**" ಎಂದರೆ ಮಾನವ ಶರೀರಗಳನ್ನು ಸೂಚಿಸುತ್ತದೆ !

**ಹೀಗೇಕೆ ?**

**ಏಕೆಂದರೆ ಅವರ "ಘಟಗಳಲ್ಲಿ" (ಪಾತ್ರೆ) ಸ್ಥಳವಿರಲಿಲ್ಲ !!**

ಯಾವ ವ್ಯಕ್ತಿಯಾದರೂ ಹೇಗೆ ಎಂದು ಕೇಳಬಹುದು !! ಬನ್ನಿ ವಿವರಿಸೋಣ –



ಒಂದು ವೇಳೆ ಒಬ್ಬ ವ್ಯಕ್ತಿ ಒಂದು ಲೋಟದಲ್ಲಿ ಅರ್ಧದಷ್ಟು ನೀರು ತೆಗೆದುಕೊಂಡರೆ, ಯಾರಾದರು ಆ ಲೋಟದಲ್ಲಿ ಏನಿದೆ ಎಂದು ಹೇಳುತ್ತಾರೆ?

ಕೆಲವರು ಹೀಗೆ ಉತ್ತರಿಸುತ್ತಾರೆ –

**"ಆ ಲೋಟದಲ್ಲಿ ಅರ್ಧದಷ್ಟು ನೀರು ತುಂಬಿದೆ"**

ಅಥವಾ

**ಆ ಲೋಟದಲ್ಲಿ ಅರ್ಧದಷ್ಟು ಖಾಲಿಯಾಗಿದೆ !!**

**ಎರಡೂ ಸರಿಯಾದ ಉತ್ತರ ಅಲ್ಲ !!**

ಸರಿಯಾದ ಉತ್ತರ ಏನೆಂದರೆ –

**"ಲೋಟದಲ್ಲಿ ಅರ್ಧದಷ್ಟು ನೀರು ತುಂಬಿದೆ ಮತ್ತು ಅರ್ಧ ಗಾಳಿ ತುಂಬಿದೆ"**

**ಗಾಳಿ ಎಲ್ಲಿಂದ ಬಂತು?**

**ಆ ಲೋಟದಲ್ಲಿ ಗಾಳಿ ತುಂಬಿದವರ್ಯಾರು ?**

**ಅದು ಸುತ್ತಮುತ್ತಲಿದ್ದ ಜಾಗ ಮತ್ತು ಅವಕಾಶ ದೊರೆತಾಗ ತಾನಾಗಿಯೇ ಬರುತ್ತದೆ!!**

**ಅದೇ ರೀತಿ ಪವಿತ್ರಾತ್ಮದಿಂದಾಗಿದೆ ಮತ್ತು**

ನಮ್ಮ ಸುತ್ತ ಇರುವ ಆತ್ಮಗಳು ಬಂದು ಸೇರುತ್ತದೆ !

ಹೌದು ! **"ಈ ಲೋಕದ ಆತ್ಮ"** !

ಹೌದು ! ಆ **"ಆತ್ಮ"** ವನ್ನು ಕುರಿತು ಕೆಳಗಿನ ವಾಕ್ಯದಲ್ಲಿ ವಿವರಿಸಲಾಗಿದೆ –

**ಮತ್ತಾಯ 13 : 22**

**"..........ಪ್ರಪಂಚದ ಚಿಂತೆಯೂ ಐಶ್ವರ್ಯದಿಂದುಂಟಾಗುವ ಮೋಸವೂ"**

ಹೌದು ! "ಬುದ್ಧಿಯಿಲ್ಲದ" ಕನ್ಯೆಯರು ತಮ್ಮ "ಪಾತ್ರೆಗಳಲ್ಲಿ" ಪವಿತ್ರಾತ್ಮನಿಗಿಂತ ಈ "ಆತ್ಮವನ್ನು" ಅಧಿಕವಾಗಿ ತುಂಬಿಸಿ

ತಕ್ಕ ಕಾಲಕ್ಕೆ ಸಿದ್ಧರಾಗದೆ ಹೋಗುತ್ತಾರೆ !

ಆದ್ದರಿಂದ ತಮ್ಮ ತಿಳುವಳಿಕೆಯ ಕಣ್ಣುಗಳಿಂದ ಕರ್ತನ ಎಪಿಫೇನಿಯಾ

"ಪ್ರಕಾಶವಾಗಿ ಹೊಳೆಯುವ" ಆತನ "ಪ್ರಸನ್ನತೆ" ವ್ಯಕ್ತವಾಗುವದನ್ನು "ನೋಡುವುದಿಲ್ಲ" !

ಆದರೆ **"ಬುದ್ಧಿವಂತೆಯರಿಗೆ" ದೀಪವು** (ಸತ್ಯವೇದವು) ಹೆಚ್ಚಾಗಿ ಬೆಳಗಿ, ಸತ್ಯದ ಬೆಳಕು ಅವರಿಗೆ ಮಹಾ ಸಂತೋಷವನ್ನುಂಟುಮಾಡುತ್ತದೆ !

“ಎಪಿಫೇನಿಯಾ” ಎಂಬ ಪದವು (ಸ್ಟ್ರಾಂಗ್ಸ್ ಗ್ರೀಕ್ # 2015) **(appearing)** ರಲ್ಲಿ “ಪ್ರತ್ಯಕ್ಷತೆ” ಎಂದು ಕೆ.ಜೆ.ವಿ. ಸತ್ಯವೇದದಲ್ಲಿ 5 ಸಾರಿ ಬರುತ್ತದೆ.

1 **ತಿಮೋಥೆಯನಿಗೆ** 6:14 – **“ನಮ್ಮ ಕರ್ತನಾದ ಯೇಸು ಕ್ರಿಸ್ತನು ಪ್ರತ್ಯಕ್ಷನಾಗುವ ತನಕ ಈ ಆಜ್ಞೆಯನ್ನು ನಿಷ್ಕಳಂಕವಾಗಿಯೂ ನಿಂದಾರಹಿತವಾಗಿಯೂ ನೀನು ಕಾಪಾಡಬೇಕು.”**

2 **ತಿಮೋಥೆಯನಿಗೆ** 1:10 - **“ಈಗ ನಮ್ಮ ರಕ್ಷಕನಾದ ಯೇಸು ಕ್ರಿಸ್ತನ ಪ್ರತ್ಯಕ್ಷತೆಯ ಮೂಲಕ ಅದನ್ನು ಪ್ರಕಾಶ ಪಡಿಸಿದ್ದಾನೆ. ಈತನು ಮರಣವನ್ನು ನಿವೃತ್ತಿ ಮಾಡಿ.....”**

( ಈ ವಾಕ್ಯವು ನಮ್ಮ ಕರ್ತನು ತನ್ನ ಮೊದಲನೇ ಬರುವಿಕೆಯಲ್ಲಿ ಲೋಕ ರಕ್ಷಕನಾಗಿ ವ್ಯಕ್ತವಾಗಿದ್ದನ್ನು ಸೂಚಿಸುತ್ತದೆ)

2 **ತಿಮೋಥೆಯನಿಗೆ** 4:1- **“.....ಆತನ ಬರೋಣದಲ್ಲಿ ಮತ್ತು ಆತನ ರಾಜ್ಯದಲ್ಲಿ ಜೀವಿಸುವವರಿಗೂ ಸತ್ತವರಿಗೂ ನ್ಯಾಯತೀರಿಸುವ ಕರ್ತನಾದ ಯೇಸು ಕ್ರಿಸ್ತನ ಮುಂದೆಯೂ....”**

2 **ತಿಮೋಥೆಯನಿಗೆ** 4:8 - **“.....ನನಗೆ ಮಾತ್ರವಲ್ಲದೆ ಆತನ ಬರೋಣವನ್ನು ಪ್ರೀತಿಸುವವರೆಲ್ಲರಿಗೆ ಸಹ ಕೊಡುವನು......”**

**ತೀತನಿಗೆ** 2:13 - **"ನಾವು ಭಾಗ್ಯಕರವಾದ ನಿರೀಕ್ಷೆಯನ್ನೂ ಮಹತ್ತಾದ ದೇವರ ಮತ್ತು ನಮ್ಮ ರಕ್ಷಕನಾದ ಯೇಸು ಕ್ರಿಸ್ತನ ಪ್ರಭಾವದ ಪ್ರತ್ಯಕ್ಷತೆಯನ್ನೂ ಎದುರು ನೋಡುವವರಾಗಿದ್ದೇವೆ."**

**(ಆದ್ದರಿಂದ "ಎಪಿಫೇನಿಯಾ" ಎಂಬ ಪದವನ್ನು "ಬರೋಣ"ವೆಂದು ಮತ್ತು ಎರಡನೇ ಬರುವಿಕೆಗೆ ಸಂಬಂಧ ಪಟ್ಟಂತೆ 4 ಬಾರಿ ಭಾಷಾಂತರಿಸಲಾಗಿದೆ.)**

"ಎಪಿಫೇನಿಯಾ" ಎಂಬ ಪದಕ್ಕೆ "ಪ್ರಕಾಶ"ದಿಂದ ಎಂದು ಒಮ್ಮೆ ಭಾಷಾಂತರಿಸಲಾಗಿದೆ –

2 **ಥೆಸಲೋನಿಕದವರಿಗೆ** 2:8 - **“ಕರ್ತನು ತನ್ನ ಬಾಯಿಯ ಉಸುರಿನಿಂದ ಅವನನ್ನು ದಹಿಸಿ ತನ್ನ ಪ್ರತ್ಯಕ್ಷತೆಯ ಪ್ರಕಾಶದಿಂದ ನಾಶಮಾಡುವನು.”**

ಈಗ ನಾವು ಮೂರನೆಯ ಗ್ರೀಕ್ ಪದವನ್ನು ಕರ್ತನ ಎರಡನೆಯ ಬರುವಿಕೆಗಾಗಿ ಉಪಯೋಗಿಸಿದ್ದನ್ನು ಕುರಿತು ಅಭ್ಯಾಸ ಮಾಡೋಣ –

# 3. ಅಪೋಕಲುಪ್ಸಿಸ್

ಈ ಗ್ರೀಕ್ ಪದದ ಅರ್ಥವೇನೆಂದರೆ ಮೊದಲೇ ಇದ್ದದ್ದನ್ನು "ಪ್ರಕಟವಾಗುವದು" ಅಥವಾ "ಬಹಿರಂಗ ಪಡಿಸುವದು" ಅಥವಾ "ತೆರೆಯನ್ನು ತೆಗೆದುಹಾಕುವದು."

ಆದರೆ ಮೊದಲು ಇದು ನೋಟಕ್ಕೆ ಮರೆಯಾಗಿತ್ತು (ಸ್ಟ್ರಂಗ್ಸ್ – ಗ್ರೀಕ್ # 602 – ವೈನ್ಸ್ (Vines) ವ್ಯಾಖ್ಯಾನವನ್ನೂ ಸಹ ನೋಡಿರಿ).

➡ ಇದು ನಮ್ಮ ಕರ್ತನ ಎರಡನೆಯ ಬರುವಿಕೆಯಲ್ಲಿ ವ್ಯಕ್ತವಾಗುವ ಕೊನೆಯ ಹಂತವಾಗಿದೆ ಮತ್ತು ಇದು

➡ ಇಡೀ ಸಭೆ ಅಥವಾ "ಕ್ರಿಸ್ತನ ಶರೀರ" (ಇಡೀ 144,000) ದವರು ಪೂರ್ತಿಯಾಗಿ ಮತ್ತು ಮಹಿಮೆ ಹೊಂದಿದ ನಂತರ ಮಾತ್ರ ಆಗುವದು.

**ಇದನ್ನು ನಾವು ಹೇಗೆ ಹೇಳುತ್ತೇವೆ ?**

ಇದಕ್ಕೆ ಉತ್ತರವನ್ನು ಕೆಳಗಿನ ವಾಕ್ಯದಲ್ಲಿ ನೋಡೋಣ –

**ಕೊಲೊಸ್ಸೆಯವರಿಗೆ 3:4**

**"ನಮಗೆ ಜೀವವಾಗಿರುವ ಕ್ರಿಸ್ತನು ಪ್ರತ್ಯಕ್ಷನಾಗುವಾಗ ನೀವು ಸಹ ಆತನ ಜೊತೆಯಲ್ಲಿ ಪ್ರಭಾವದಿಂದ (ಮಹಿಮೆಯಿಂದ)ಕೂಡಿದವರಾಗಿ ಪ್ರತ್ಯಕ್ಷರಾಗುವಿರಿ."**

ಈ ವಾಕ್ಯವು ಕರ್ತನು –

**"ಪ್ರತ್ಯಕ್ಷ"** ನಾಗುವಾಗ ಅಥವಾ **"ಕಾಣಿಸುವಾಗ"** ಅಥವಾ ಲೋಕಕ್ಕೆ ವ್ಯಕ್ತವಾಗುವಾಗ ಇದು ಸೂಚಿಸುತ್ತದೆ ಮತ್ತು ಆತನ ಜೊತೆ ಸಭೆ (ನೀವು) **"ಮಹಿಮೆ"** ಯಲ್ಲಿರುವದನ್ನು ಸಹ ಸೂಚಿಸುತ್ತದೆ !!

ಹೌದು ! ಇಲ್ಲಿ ಉಪಯೋಗಿಸಿರುವ ಗ್ರೀಕ್ ಪದವೇನೆಂದರೆ

**"ಅಪೋಕಲುಪ್ಸಿಸ್"**

ಈ ನಿಜಾಂಶವನ್ನು ಇನ್ನೊಂದು ವಾಕ್ಯವು ಬೆಂಬಲ ನೀಡುತ್ತದೆ –

**ರೋಮಾಪುರದವರಿಗೆ 8 : 19**

**"ದೇವಪುತ್ರರ ಮಹಿಮೆಯು ಯಾವಾಗ ಪ್ರತ್ಯಕ್ಷವಾದೀತೆಂದು (ಗ್ರೀಕ್‌ನಲ್ಲಿ "ಅಪೋಕಲುಪ್ಸಿಸ್") ಜಗತ್ತು ಬಹು ಲವಲವಿಕೆಯಿಂದ ಎದುರು ನೋಡುತ್ತಿರುವದು".**

**ಇದರ ಅರ್ಥವೇನು?**

ಇಲ್ಲಿ ವಾಕ್ಯವು **"ಜಗತ್ತು"** ಎಂದು ಹೇಳುತ್ತದೆ, ಇದು ಇಡೀ ಮನುಷ್ಯ ಜಾತಿಯನ್ನು ಸೂಚಿಸುತ್ತದೆ !

ಈ ವಾಕ್ಯದಲ್ಲಿ **"ಜಗತ್ತು"** ಅಥವಾ ಮನುಷ್ಯ ಜಾತಿಯು "ಬಹು ಲವಲವಿಕೆಯಿಂದ ಎದುರು ನೋಡುತ್ತಿರುವದು" ಎಂದು ಹೇಳಲಾಗಿದೆ !




**ಇದರ ಅರ್ಥವೇನು?**

ಇದು ಬಳಲಿಕೆ, ದು:ಖ ಮತ್ತು ಮರಣದಿಂದ ಬಿಡುಗಡೆ ಹೊಂದಲು ಬಯಸುತ್ತಿದೆ ಎಂದು ಸೂಚಿಸುತ್ತದೆ !

ಈಗ ಸತ್ಯವೇದವು ನಮಗೆ ಬೋಧಿಸುವದೇನೆಂದರೆ ಈ **"ಶ್ರದ್ಧೆಯಿಂದ ಬಯಸುವ"** ಅಥವಾ ಅದರ ನೆರವೇರಿಕೆಗೆ ಪ್ರತ್ಯೇಕ ಸಮಯಕ್ಕಾಗಿ ಎದುರು ನೋಡುತ್ತಿರುವದು !!

**ಮತ್ತು ಅದು ಯಾವಾಗ ಆಗುವದು?**

ಇದರ ಉತ್ತರವೇನೆಂದರೆ –

**"........ದೇವಪುತ್ರರ ಮಹಿಮೆಯು...........ಪ್ರತ್ಯಕ್ಷವಾದಾಗ"**

ಯಾರು ಈ **"ದೇವಪುತ್ರರು"**?

ಇವರು ವಿಶೇಷವಾದ **"ಪುತ್ರರಾಗಿದ್ದು"** ಯೇಸು ಇವರನ್ನು ಹುಡುಕಿ ಬಹಳ ವಿಶೇಷವಾದ ಅವಕಾಶವನ್ನು ನೀಡುತ್ತಾನೆಂದು ಕೆಳಗಿನ ವಾಕ್ಯದಲ್ಲಿ ಓದುತ್ತೇವೆ -

**ಯೋಹಾನ 1 : 12**

**"ಆದರೆ ಯಾರಾರು ಆತನನ್ನು ಅಂಗೀಕರಿಸಿದರೋ ಅವರಿಗೆ ಅಂದರೆ ಆತನ ಹೆಸರಿನ ಮೇಲೆ ನಂಬಿಕೆಯಿಡುವವರಿಗೆ ದೇವರ ಪುತ್ರರಾಗುವ ಅಧಿಕಾರವನ್ನು ಆತನು ಕೊಟ್ಟನು."**

ಹೌದು ! ಇವರಿಗೆ ದೇವರ ಮಕ್ಕಳಾಗುವ ಭಾಗ್ಯವುಂಟಾಗುತ್ತದೆ.

**ಇವರು ಮಹಿಮೆಹೊಂದಿದ ಸಭೆಯಾಗಿ ದೈವೀಕ ಸ್ವಭಾವದಲ್ಲಿ ದೇವರ ಮಕ್ಕಳಾಗಿರುವರು !!**

ಆದ್ದರಿಂದ ನಾವು ನೋಡುವದೇನೆಂದರೆ, ಸಭೆ ನೆರವೇರಿದ ಮೇಲೆ ಮತ್ತು ಅದು ಮಹಿಮೆ ಹೊಂದಿದ ಮೇಲೆ **"ಜಗತ್ತಿಗೆ"** ಆಶೀರ್ವಾದಗಳ ಆರಂಭದ ರಾಯಭಾರಿಯಾಗಿದ್ದು

**"ಅಪೋಕಲುಪ್ಸಿಸ್"** ಹಂತದಲ್ಲಿ ಅಥವಾ **"ರಾಜಾಧಿರಾಜ ಮತ್ತು ಕರ್ತರ ಕರ್ತನು"** ಪ್ರಕಟವಾಗುವಾಗ ಆಶಯವಾಗಿರುವರು.

**ನಂತರ ಏನಾಗುತ್ತದೆ?**

ಇದಕ್ಕೆ ಉತ್ತರವನ್ನು ಕೆಳಗಿನ ವಾಕ್ಯದಲ್ಲಿ ಓದೋಣ –

**2 ಥೆಸಲೋನಿಕದವರಿಗೆ 1 : 7,8**

**"......ಯೇಸು ಕರ್ತನು ತನ್ನ ಶಕ್ತಿಯನ್ನು ತೋರ್ಪಡಿಸುವ ದೇವದೂತರಿಂದ (ಮಹಿಮೆ ಹೊಂದಿದ ಸಭೆ) ಕೂಡಿದವನಾಗಿ ಉರಿಯುವ ಬೆಂಕಿಯಲ್ಲಿ ಆಕಾಶದಿಂದ ಪ್ರತ್ಯಕ್ಷನಾಗುವ ಕಾಲದಲ್ಲಿ (ಅಪೋಕಲುಪ್ಸಿಸ್) ಅದನ್ನು ಕೊಡುವನು .........."**

ಈ ವಾಕ್ಯವು ನಮಗೆ ಸ್ಪಷ್ಟವಾಗಿ ತೋರಿಸುವದೇನೆಂದರೆ ಸಭೆಯು ಮಹಿಮೆಯಲ್ಲಿ ನೆರವೇರಿದ ನಂತರ ಮತ್ತು ಅವರು

**"ಪ್ರಬಲವಾದ ದೂತ"** ರಾಗಿ ಆದ ಮೇಲೆ –

(ಅವರನ್ನು **"ಪರಿಶುದ್ಧ ದೂತರು"** ಎಂದು ಮತ್ತಾಯ 25 :31 ರಲ್ಲಿ ಮತ್ತು **"ಪರಿಶುದ್ಧರು"** ಎಂದು ಯೂದನು :14 ರಲ್ಲಿ ಕರೆಯಲಾಗಿದೆ)

....ಮಹಾ "**ಸಂಕಟದ ಕಾಲದಲ್ಲಿ**" ಬೆಂಕಿಯು ಎಲ್ಲಾ ಮಾನವ ವ್ಯವಸ್ಥೆಯನ್ನು ನಾಶಮಾಡುತ್ತದೆ ಮತ್ತು ಅವುಗಳನ್ನು ಸುಟ್ಟು ಬಿಡುವವು (2 ಪೇತ್ರ 3 : 10)

"**ಉರಿಯುವ ಬೆಂಕಿ**"ಯು ದೇವರ ನ್ಯಾಯ ತೀರ್ಪಿಗೆ ಸೂಚಿತವಾಗಿದೆ !

ಈ ನ್ಯಾಯತೀರ್ಪುಗಳು ಎರಡು ವರ್ಗಗಳ ವಿರುದ್ಧವಾಗಿದೆ ಎಂದು ಇಲ್ಲಿ ಸೂಚಿಸಲಾಗಿದೆ –

**".........ದೇವರನ್ನರಿಯದವರಿಗೂ....."**

ಇದು "**ಕ್ರೈಸ್ತರಲ್ಲದ**" ಲೋಕದ ಜನರಿಗೆ ಸೂಚಿತವಾಗಿದ್ದು........ ಸತ್ಯವೇದವನ್ನು ಮತ್ತು "**ಸುವಾರ್ತೆಯನ್ನು**" ಎಂದೂ ಅರಿಯದವರೂ ಆಗಿರುವವರನ್ನು ಸೂಚಿಸುತ್ತದೆ !

ಇವರನ್ನು ಸಾಂಪ್ರದಾಯಕವಾಗಿ "**ನಂಬಿಕೆಯಿಲ್ಲದವರು**" ಎಂದು ಕರೆಯಲಾಗುತ್ತದೆ !

ನಂತರ ಎರಡನೆಯ ವರ್ಗದವರನ್ನು ಹೀಗೆ ವಿವರಿಸಲಾಗಿದೆ –

**"ತನ್ನ ಸುವಾರ್ತೆಗೆ ಒಳಪಡದವರಿಗೂ"**

ಇದು ಲೋಕದವರಲ್ಲಿರುವ ಹೆಸರಿಗೆ ಮಾತ್ರ ಕ್ರೈಸ್ತರು ........."**ಸುವಾರ್ತೆ**" ಯನ್ನು ಒಂದು "ಅಳತೆಯಲ್ಲಿ ಕೇಳಿರುವವರನ್ನು ಸೂಚಿಸುತ್ತದೆ !!

ಇವರನ್ನು ಸಾಂಪ್ರದಾಯಕವಾಗಿ "**ವಿಶ್ವಾಸಿಗಳು**" ಎಂದು ಕರೆಯಲಾಗುತ್ತದೆ.

ಇದೂ ಸಹ ಕೊನೆಯ ನ್ಯಾಯತೀರ್ಪಿನಲ್ಲಿ ಹೆಸರಿಗೆ ಮಾತ್ರ ಕ್ರೈಸ್ತರಾಗಿರುವ ಕ್ರಿಸ್ತವಿರೋಧಿ ವ್ಯವಸ್ಥೆಯ ಎರಡು ವಿಭಾಗಗಳನ್ನು ಸೂಚಿಸುತ್ತದೆ.

"**ಮೃಗ**" ಮತ್ತು "**ಸುಳ್ಳು ಪ್ರವಾದಿ**"

ಇದು ಎರಡನೆಯ ಲೋಕ ಮತ್ತು ........... ಸುವಾರ್ತಾ ಯುಗದ ಅಂತ್ಯವನ್ನು ತರುತ್ತಿದೆ ಮತ್ತು ಆಶೀರ್ವಾದವುಳ್ಳ

## ......ಕಣ್ಣಿಗೆ ಕಾಣುವ ಮತ್ತು "ಸಮಾಧಾನವುಳ್ಳ" ದೇವರ ರಾಜ್ಯದ ಹಂತವು ಭೂಮಿಯಲ್ಲಿ ಸ್ಥಾಪನೆಯಾಗುತ್ತದೆ

......ಈ ಸಮಯದಲ್ಲಿ ಅದ್ಭುತವಾದ ದೇವರ ವಾಕ್ಯವು ಕ್ರಮೇಣವಾಗಿ ನೆರವೇರುತ್ತದೆ ಎಂದು ಕೆಳಗಿನ ವಾಕ್ಯದಲ್ಲಿ ಓದುತ್ತೇವೆ –

"ಈ ಕಾರಣದಿಂದ ದೇವರು ಆತನನ್ನು ಅತ್ಯುನ್ನತವಾಗಿ ಏರಿಸಿ ಎಲ್ಲಾ ಹೆಸರುಗಳಿಗಿಂತ ಉನ್ನತವಾದ ಹೆಸರನ್ನು ಆತನಿಗೆ ದಯಪಾಲಿಸಿದ್ದಾನೆ. ತಂದೆಯಾದ ದೇವರ ಮಹಿಮೆಗಾಗಿ ಯೇಸು ಕ್ರಿಸ್ತನು ಕರ್ತನೆಂದು ಪ್ರತಿಯೊಂದು ನಾಲಿಗೆಯೂ ಅರಿಕೆ ಮಾಡುವದು." (ಫಿಲಿಪ್ಪಿ 2:10–11)

ನಾವು ಮೊದಲೇ ನೋಡಿದ ಹಾಗೆ ಕರ್ತನ **"ಪರೌಸಿಯಾ"** ಮತ್ತು **"ಎಪಿಫೇನಿಯಾ"** ಹಂತಗಳಲ್ಲಿ ಲೋಕದವರಿಗೂ ಸಹ ಪರಿಣಾಮ ಉಂಟಾಗುವದು ಆದರೆ .......... ಸಭೆ ವರ್ಗದವರಷ್ಟು ಅಲ್ಲ. ಲೋಕವು ಕ್ರಮೇಣವಾಗಿ ಸತ್ಯದಲ್ಲಿ ಮತ್ತು ಜ್ಞಾನದ ಎಲ್ಲಾ ವಿಷಯಗಳಲ್ಲಿ ತಿಳುವಳಿಕೆಯನ್ನು ಹೊಂದಿ ಅಧಿಕ ವ್ಯಾಪಕವಾದಾಗ –

......ಎಲ್ಲಾ ಮಾನವ ವ್ಯವಸ್ಥೆಗಳು **"ಕದಲಿಸಲು"** ಕಾರಣವಾಗುತ್ತದೆ ಎಂದು ಕೆಳಗಿನ ವಾಕ್ಯದಲ್ಲಿ ಓದುತ್ತೇವೆ –

ಇಬ್ರಿಯ 12:26-27

"ಆತನ ಧ್ವನಿಯು ಆಗ ಭೂಮಿಯನ್ನು ಕದಲಿಸಿತು; ಈಗಲಾದರೋ ಆತನು-- ಇನ್ನೊಂದೇ ಸಾರಿ ನಾನು ಭೂಮಿಯನ್ನು ಮಾತ್ರವಲ್ಲದೆ ಪರಲೋಕವನ್ನೂ ಕದಲಿಸುತ್ತೇನೆಂದು ವಾಗ್ದಾನ ಮಾಡಿ ಹೇಳಿದ್ದಾನೆ. ಇದಲ್ಲದೆ ಇನ್ನೊಂದೇ ಸಾರಿ ಎಂಬ ಮಾತು ಕದಲಿ ಸಿರುವ ವಸ್ತುಗಳು ನಿರ್ಮಿತವಾದವುಗಳಾದದರಿಂದ ತೆಗೆದುಹಾಕಲ್ಪಡ ಬೇಕೆಂಬದನ್ನು ಸೂಚಿಸುತ್ತದೆ; ಆಗ ಕದಲಿಸದೆ ಇರುವ ವಸ್ತುಗಳು ಸ್ಥಿರವಾಗಿ ನಿಲ್ಲುವವು."

ಹೌದು ! ಇದು ಎರಡನೆಯ ಲೋಕದ "ಆಕಾಶ" ಮತ್ತು "ಭೂಮಿ" ಸಂಪೂರ್ಣವಾಗಿ ನಾಶವಾಗುವುದಕ್ಕೆ ಚಿತ್ರಣವಾಗಿದೆ.

ಆ ಮಹಾ ಸಂಕಟದ ಕಾಲದಲ್ಲಿ (ಮತ್ತಾಯ 24 : 20, 21).

ಈ ಕದಲುವಿಕೆಯಿಂದ ಎಲ್ಲಾ ವ್ಯವಸ್ಥೆಗಳಿಗೆ ಮಹಾ ನಾಶ ಉಂಟಾಗಲು ಕಾರಣವಾಗುತ್ತದೆ. ಇದರಿಂದ

➡ ಲೋಕದವರ **"ತಿಳುವಳಿಕೆಯ ಕಣ್ಣುಗಳು"** ತೆರೆಯುತ್ತದೆ ಎಂದು ಕೆಳಗಿನ ವಾಕ್ಯದಲ್ಲಿ ಓದುತ್ತೇವೆ –

**ಯೆಶಾಯನು** 29 : 18 - **"ಆ ದಿನದಲ್ಲಿ ಕಿವುಡರು ಪುಸ್ತಕದ ಮಾತುಗಳನ್ನು ಕೇಳುವರು ಕುರುಡರ ಕಣ್ಣುಗಳು ಕತ್ತಲೆಯೊಳಗಿಂದಲೂ ಅಂಧಕಾರದೊಳಗಿಂದಲೂ ನೋಡುವವು."**

.......ಮತ್ತೆ ಹೀಗೆ ಓದುತ್ತೇವೆ –

**ಯೆಶಾಯನು** 35 : 5 - **"ಆಗ ಕುರುಡರ ಕಣ್ಣುಗಳು ತೆರೆಯಲ್ಪಡು ವವು, ಕಿವುಡರ ಕಿವಿಗಳು ಕೇಳುವವು."**

ಹೌದು ! ಇದರಿಂದ ಕ್ರಮೇಣವಾಗಿ ಕೆಳಗಿನ ವಾಕ್ಯವು ನೆರವೇರಲು ಕಾರಣವಾಗುತ್ತದೆ –

**ಪ್ರಕಟನೆ 1 : 7**

**"......ಎಲ್ಲರ ಕಣ್ಣುಗಳು ಆತನನ್ನು ಕಾಣುವವು; ಆತನನ್ನು ಇರಿದವರು ಸಹ ಕಾಣುವರು".**

ಹೌದು ! ಕ್ರಮೇಣವಾಗಿ ಎಲ್ಲಾ ಮನುಷ್ಯರ "ತಿಳುವಳಿಕಕೆಯ ಕಣ್ಣುಗಳು (ಮನೋನೇತ್ರಗಳು)" ತೆರೆಯಲ್ಪಡುವವು !

**"ಆತನನ್ನು ಇರಿದ"** ಇಸ್ರಾಯೇಲ್ಯರ "**ತಿಳುವಳಿಕೆಯ ಕಣ್ಣುಗಳು**" ಸಹ ತೆರೆಯಲ್ಪಡುವವು, ಕಾರಣವೇನೆಂದರೆ ನಮ್ಮ ಕರ್ತನು ಪ್ರವಾದಿಸಿದ ವಾಕ್ಯವನ್ನು ಹೇಳಲು ಎಂದು ಕೆಳಗಿನ ವಾಕ್ಯದಲ್ಲಿ ನೋಡುತ್ತೇವೆ. –

**ಮತ್ತಾಯ** 23 : 39 - **"ಈಗಿನಿಂದ - ಕರ್ತನ ಹೆಸರಿನಲ್ಲಿ ಬರುವವನಿಗೆ ಆಶೀರ್ವಾದ ಎಂದು ನೀವು ಹೇಳುವ ತನಕ ನೀವು ನನ್ನನ್ನು ನೋಡುವದೇ ಇಲ್ಲವೆಂದು ನಿಮಗೆ ಹೇಳುತ್ತೇನೆ ಅಂದನು".**

ಹೌದು ! ಅವರು ದೀರ್ಘ ಕಾಲವಾಗಿ ಕಾಯುತ್ತಿದ್ದ ಮತ್ತು ಅವರ ಪ್ರೀತಿಯ ಮೆಸ್ಸೀಯನನ್ನು "**ಕಾಣುವರು**" !

ಈ "**ಅಪೋಕಲುಪ್ಸಿಸ್**" ಹಂತವು ಸಾವಿರ ವರ್ಷದ ಕೊನೆಯವರೆಗೂ ಮುಂದುವರೆಯುವುದು.

**"ಸಮಾಧಿಗಳಲ್ಲಿರುವವರೆಲ್ಲರು ಆತನ ಧ್ವನಿಯನ್ನು ಕೇಳಿ ಎದ್ದು ಹೊರಗೆ ಬರುವ....."** ವರೆಗೂ ಮುಂದುವರೆಯುವದು (ಯೋಹಾನ 5 : 28)

ಹೌದು ! ಇದು "ಮರಣದಿಂದ ಎಚ್ಚೆತ್ತುಕೊಳ್ಳುವದಾಗಿದ್ದು" ಇದು ಕ್ರಮೇಣವಾಗಿ ಜರಗುತ್ತದೆ ಎಂದು ಕೆಳಗಿನ ವಾಕ್ಯದಲ್ಲಿ ವಿವರಿಸಲಾಗಿದೆ.

**"ಇಗೋ ಕಡೆಯವರಾಗಿರುವ ಕೆಲವರು ಮೊದಲಿನವರಾಗುವರು; ಮೊದಲಿನವರಾಗಿರುವ**

ಕೆಲವರು ಕಡೆಯವರಾಗುವರು ಅಂದನು". (ಲೂಕ 13 : 30)

ಹೌದು ! ಮತ್ತು ಕೊನೆಯದಾಗಿ ನಾವು ಹೀಗೆ ಓದುತ್ತೇವೆ –

**ಯೆಶಾಯನು 40 : 5**

"ಯೆಹೋವನ ಮಹಿಮೆಯ ಗೋಚರವಾಗುವದು (ಅಪೋಕಲುಪ್ಸಿಸ್) ಎಲ್ಲಾ ಮನುಷ್ಯನು ಒಟ್ಟಿಗೆ ಅದನ್ನು ಕಾಣುವರು".

ಹೌದು ! "ಎಲ್ಲಾ ಮನುಷ್ಯರು" ಮತ್ತು ಬದುಕಿರುವ ಮತ್ತು ಸತ್ತಿರುವ ಎಲ್ಲಾ ಮನುಷ್ಯ ಜಾತಿಯವರು ಕರ್ತನ ಅಪೋಕಲುಪ್ಸಿಸ್ ಅನ್ನು "ನೋಡುವರು" ಮತ್ತು ತಿಳಿದುಕೊಳ್ಳುವರು ಮತ್ತು ಗುರುತಿಸುವರು !!

ಮತ್ತು ಕೊನೆಯಲ್ಲಿ ಮಹತ್ತಾದ ಪರಿಣಾಮ ಈ ರೀತಿಯಾಗಿರುತ್ತದೆ ಎಂದು ಕೆಳಗಿನ ವಾಕ್ಯದಲ್ಲಿ ಓದುತ್ತೇವೆ –

**ಪ್ರಕಟನೆ 5 : 13**

"ಇದಲ್ಲದೆ ಆಕಾಶ ದಲ್ಲಿಯೂ ಭೂಮಿಯ ಮೇಲೆಯೂ ಭೂಮಿಯ ಕೆಳಗೂ ಸಮುದ್ರದಲ್ಲಿಯೂ ಅವುಗಳಲ್ಲಿರುವ ಎಲ್ಲಾ ಸೃಷ್ಟಿಗಳೂ -ಸಿಂಹಾಸನಾಸೀನನಾಗಿರುವಾತನಿಗೂ ಕುರಿಮರಿಯಾದಾತನಿಗೂ ಸ್ತೋತ್ರಮಾನ ಪ್ರಭಾವ ಬಲವು ಯುಗಯುಗಾಂತರಗಳಲ್ಲಿಯೂ ಇರಲಿ ಎಂದು ಹೇಳುವದನ್ನು ನಾನು ಕೇಳಿದೆನು."

**ಹೌದು ! ಜ್ಞಾನೋದಯ, ಸತ್ಯ ಮತ್ತು ಆಶೀರ್ವಾದಗಳು ಪಡೆದುಕೊಂಡ ಈ ಸಾವಿರ ವರ್ಷಗಳ ನಂತರ ..........**

**... ಇದು ಮಹಿಮೆಯುಳ್ಳ ಪರಿಣಾಮವಾಗಿರುತ್ತದೆ!!**

**ಎರಡನೆಯ ಬರುವಿಕೆಗೆ ಸಂಬಂಧಿಸಿದಂತಹ "ಅಪೋಕಲಪ್ಸಿಸ್" ಪದವು (ಸ್ಟ್ರಾಂಗ್ಸ್ – ಗ್ರೀಕ್ # 601/602)**

**ಬರುವ ಮತ್ತು "ಗೋಚರ" ಎಂದು ಭಾಷಾಂತರಿಸಿರುವ (revealed) ಎಲ್ಲಾ 8 ವಾಕ್ಯಗಳು ಯಾವುದೆಂದರೆ**

ಲೂಕ 17:30 — "ಮನುಷ್ಯಕುಮಾರನು ಪ್ರತ್ಯಕ್ಷವಾಗುವ ದಿವಸದಲ್ಲಿ"

ರೋಮಾಪುರದವರಿಗೆ 8 : 18 – "ನಮಗೋಸ್ಕರ ಮುಂದಿನ ಕಾಲದಲ್ಲಿ ಪ್ರತ್ಯಕ್ಷವಾಗುವ"

1 ಕೊರಿಂಥದವರಿಗೆ 3:13- "ಯಾಕಂದರೆ ಆ ದಿನವು ಬೆಂಕಿಯೊಡನೆ ಪ್ರತ್ಯಕ್ಷವಾಗಿ..."

2 ಥೆಸಲೋಸಿಕದವರಿಗೆ 1 : 7 — "ಆಕಾಶದಿಂದ ಪ್ರತ್ಯಕ್ಷನಾಗುವ ಕಾಲದಲ್ಲಿ"

1 ಪೇತ್ರನು 1 : 5 — "..........ಅಂತ್ಯಕಾಲದಲ್ಲಿ ಪ್ರತ್ಯಕ್ಷವಾಗುವದಕ್ಕೆ ಸಿದ್ಧವಾಗಿರುವ..."

1 ಪೇತ್ರನು 1 : 13 — "ಯೇಸುಕ್ರಿಸ್ತನು ಪ್ರತ್ಯಕ್ಷನಾಗುವಾಗ..."

1 ಪೇತ್ರನು 4 : 13 — " .....ಆತನ ಮಹಿಮೆಯ ಪ್ರತ್ಯಕ್ಷತೆಯಲ್ಲಿಯೂ..."

1 ಪೇತ್ರನು 5 : 1 — "......ಮುಂದೆ ಪ್ರತ್ಯಕ್ಷನಾಗುವ ಪ್ರಭಾವದಲ್ಲಿ ಪಾಲುಗಾರನೂ..."

**"ಅಪೋಕಲುಪ್ಸಿಸ್"** ಎಂಬ ಆದೇ ಪದವನ್ನು ಆಂಗ್ಲದಲ್ಲಿ **"ಮ್ಯಾನಿಫೆಷ್ಟೇಷನ್"** **(manifestation)** ಎಂದು ಕೆಳಗಿನ ವಾಕ್ಯದಲ್ಲಿ ಭಾಷಾಂತಗರಿಸಿದೆ —

ರೋಮಾಪುರದವರಿಗೆ 8 : 19 — "ದೇವಪುತ್ರರ ಮಹಿಮೆ ಯಾವಾಗ ಪ್ರತ್ಯಕ್ಷ..."

**"ಅಪೋಕಲುಪ್ಸಿಸ್"** ಎಂಬ ಅದೇ ಪದವನ್ನು ಆಂಗ್ಲದಲ್ಲಿ **"ಕಮಿಂಗ್"** **(coming)** ಮತ್ತು **"ಅಪೀಯರಿಂಗ್"** **(appearing)** ಎಂದು ಭಾಷಾಂತಗರಿಸಲಾಗಿದೆ.

1 ಕೋರಿಂಥ 1 : 7 – "ಯೇಸುಕ್ರಿಸ್ತನ ಪ್ರಯ್ಯಕ್ಷತೆಯನ್ನು ಎದುರು ನೋಡುತ್ತಾ ಇದ್ದೀರಿ."

1 ಪ್ರೇತನ 1 : 7 — "ಯೇಸುಕ್ರಿಸ್ತನ ಪ್ರತ್ಯಕ್ಷವಾಗುವಾಗ ....."

ಆದ್ದರಿಂದ ಎಲ್ಲಾ ಸೇರಿ ಒಟ್ಟು 11 ವಾಕ್ಯಗಳಿವೆ.

ನಮ್ಮ ಕರ್ತನ ಎರಡನೆಯ ಬರುವಿಕೆಯ ವಿಧಾನ ಮತ್ತು ಸ್ವಭಾವವನ್ನು ಕುರಿತು ವಿವರವಾಗಿ ಅಭ್ಯಾಸ ಮಾಡಿದ ಮೇಲೆ ಮುಂದಿನ ಮತ್ತು ಕೊನೆಯ ಪ್ರಶ್ನೆ ನಮ್ಮ ತುಟಿಗಳಿಂದ ಬರುವುದೇನೆಂದರೆ –

**"ಕರ್ತನ ಎರಡನೆಯ ಬರುವಿಕೆ ಯಾವಾಗ?"**

ಅಥವಾ....

## **ಸತ್ಯವೇದವು ಆ ದಿನಾಂಕವನ್ನು ಪ್ರಕಟಿಸುತ್ತದೆಯೇ?**


ಎರಡನೆಯ ಬರುವಿಕೆಯ ಮೂರು ಭಾಗದ ಅಭ್ಯಾಸದ ಕೊನೆಯ ಭಾಗವನ್ನು ನೋಡಲು ನಾವು ಮುಂದಿನ ಅಭ್ಯಾಸದವರೆಗೂ ಕಾಯಬೇಕಾಗಿದೆ ಮತ್ತು

**"ಕರ್ತನ ಪುಸ್ತಕದಲ್ಲಿ"** ಹುಡುಕಿ ಈ ಪ್ರಶ್ನೆಗಳಿಗೆ ಉತ್ತರ ಇದೆಯೇ ಎಂದು ಕಾದು ನೋಡಬೇಕಾಗಿದೆ !!



For Private Circulation Only

NOT FOR SALE




For more Subjects contact: MESSENGERS OF CHRIST  E-mail: thekingdom1_6@yahoo.com